| 9 | Prashanth kumar K S | S/o. Sheshappa K BDept. of Anatomy & HistologyCollege of Vety. & nimalSciences, Mannuthy, Trissur Kerala 680 651 | 20/05/1989 | IIA | IIA/ PHS | 78.80 |
| 10 | Venkatesh S M | S/o. late. Malave Gowda<br>No. 12, SM Doddi, Akkur post, Kasaba Hobli, Channapatna<br>Tq. Ramanagar 562 160 | 10/07/1988 | IIIA | GM | 78.30 |
| 11 | Dhananjaya C N | S/o. Nagaraju D<br>Channarayapatna post &<br>Village, Devanahalli tq.<br>Bangalore (R) 562 135 | 20/06/1989 | IIIA | GM/ I/FS | 78.30 |
| 12 | Yathish kumar M S | S/o. Sanjeeva Gowda<br>Mata House, Samedha kalapu post, Dharma-sthala,<br>Beltangadi Tq. D.K. 574 216 | 08/04/1988 | IIIA | GM/R | 78.20 |
| 13 | Deepthi shree R | D/o. Ramesh S K<br>Sr. Vety. Inspector, Prithni Nilaya, 10th Cross, Gandhainagar, Near Bevinakatte, Hosahalli<br>Mandya 571 401 | 21/08/1989 | IIIA | GM/F | 78.20 |
| 14 | Shwetha shree M J | D/o. Jayanna M N<br>Renuka Nilaya, Didaga post Hirisave Hobli, Channarayapatna<br>Hassan 573 141 | 19/10/1988 | IIIA | GM/F | 77.80 |
| 15 | Preetham kumar S V | S/o. Vasudeva Gowda K A,<br>Sangameshwar Pet Road, Devadhana,<br>Chickmagalur 577 136 | 21/08/1988 | GM | GM/R | 77.40 |
| 16 | Chandra Naik M | S/o. Motla naik T<br>Lakshmipura village<br>Sathur post, Harapanahalli<br>Davanagere 583 125 | 25/05/1988 | SC | SC | 76.80 |
| 17 | Shreyas B Raj | S/o. Basavarajappa L<br>Bhovi Colony, HRS Colony Behind Canara Bank, 2nd Cross, Vidyanagar, Shimoga 577 201 | 19/10/1989 | SC | SC | 76.60 |
| 18 | Mallikarjun Rayappa Iliger | S/o. Rayappa<br>C/o. R S Iliger, Havanagi Plot, Savanur, Mallikarjuna Nilaya<br>Savanur, Haveri 581 118 | 12/07/1989 | GM | GM/R | 76.40 |
| 19 | Veena M V | D/o. Virupakshappa MNo.227, Srishyla Nilaya 1st Stage, 2nd Block, Near Nehru Park, Vinobanagar, Shimoga 577204 | 07/07/1989 | GM | GM/F | 75.50 |
| 20 | Siddaramesh A S | S/o. Shivalingaiah A S<br>Anuvanahalli, Shivani post Tarikere, Chikkamagalur 577549 | 06/09/1989 | GM | GM | 75.40 |

| Sl No | Name | Address | Date of Birth | Cate-gory | Selec-tion | %age of marks (BVSc.) |
|---|---|---|---|---|---|---|
| 1 | 2 | 3 | 4 | 5 | 6 | 7 |
| 21 | Sunilkumar K N | S/o. Nagaraj Shetty<br>C/o. Telephone Exchange,<br>Harishchandra pura,<br>Gonikoppa,Virajpet, Kodagu 571 213 | 03/11/1989 | SC | SC/R | 75.40 |
| 22 | Raghu Naik K | S/o. Krishna Naik<br>Beedugondanahalli village<br>Medugondana-halli post,<br>\|Channagiri Tq,<br>Davanagere 577 213 | 20/02/1990 | SC | SC | 74.90 |
| 23 | Ramesha K | S/o Krishnappa<br>No. 483, janatha colony,<br>Baragur, Sira Tq., Tumkur 572 113 | 06/05/1989 | IIA | IIA/ Ex. MPS | 74.80 |
| 24 | Ranjitha V H | D/o. Haladappa G<br>Maruthi Nilaya, Behind Housing<br>Board Colony, V V Nagar, Hiriyur,<br>Chitradurga 577 599 | 12/05/1989 | GM | GM/F | 74.30 |
| 25 | Vijay kumar | S/o. Radhakrishna<br>Dept. of VPT, Roon No. 35, Vety.<br>College Boys Hostel, Hebbal,<br>B'lore 24 | 14/11/1989 | GM | GM | 74.10 |
| 26 | Veena V | D/o. Venkataravanappa<br>Veena Naveen Nilaya<br>Rajiv Nagar, 2nd street<br>Chintamani, Chikkaballpur 563 125 | 26/07/1988 | I | I/F | 74.00 |
| 27 | Shivakumara Parameswarappa Nyamathi | S/o. P.K. Nyamathi<br>Old Bus stand, Masur<br>Hirekerur Tq. Haveri dist 581210 | 06/03/1989 | IIA | GM | 73.90 |
| 28 | Kiran M | S/o. T. Manjappa<br>Dept. Vety. Physiology, Room No.<br>40, Vety. College Boys Hostel,<br>Hebbal, B'lore 24 | 01/11/1987 | ST | ST | 73.60 |
| 29 | Manu H T | S/o. Thimmaiah H T<br>C/o. Vasantha lakshmi<br>Near BCM girls Hostel, Adjasent to<br>Court, Belagola, Mudigere Tq.<br>Chikkamaglur 577 132 | 15/03/1990 | SC | SC | 73.50 |
| 30 | Yashasvi Naravi | S/i. Shekar NaraviPremachandra<br>nagara, HaradyPutur, D.K. 574 201 | 13/10/1988 | GM | GM | 73.20 |
| 31 | Honavanthevva Kari Goudra | D/o. Venkanagouda Karigoudra<br>Pethaalur post, Mundaragi Tq.<br>Gadag 582 113 | 05/10/1989 | IIIA | GM | 73.20 |
| 32 | Maruti | S/o. Gorakhnath<br>Room No. 121, Vety. College Boys<br>Hostel, Hebbal, B'lore - 24 | 01/06/1988 | IIIB | GM | 73.00 |
| 33 | Anusha V | D/o. Venkatachalapathy N, Asst.<br>Registrar, Agri. College<br>Hassan 573 225 | 28/09/1989 | GM | GM/F | 73.00 |
| 34 | Naveen kumar T J | S/o. Jayanna T B<br>Subhash nagar, Emmedoddi<br>Road, Kadur post & Tq.,<br>Chikkamagalur 577 548 | 14/04/1990 | GM | GM | 72.90 |
| 35 | Anitha M | D/o. Manjunatha S<br>Machikere Raste, Jagalur<br>Davanagere 577 553 | 10/08/1987 | IIIB | GM/F | 72.70 |
| 36 | Sadanand Khandekar | S/o. Bharamappa Khandekar<br>C/o. Shivanand Khandekar<br>Intel Technology Pvt. Ltd., No. 136,<br>Airport Road, B'lore 17 | 12/01/1990 | IIA | GM | 72.60 |
| 37 | Abilash M R | S/o. Rajanna<br>No. 100, Near TB, Masthi Road<br>Ashok nagar, Railway Station Circle,<br>Malur, Kolar 563130 | 21/10/1989 | GM | GM | 72.50 |

| Sl No | Name | Address | Date of Birth | Cate-gory | Selec-tion | %age of marks (BVSc.) |
|---|---|---|---|---|---|---|
| 1 | 2 | 3 | 4 | 5 | 6 | 7 |
| 38 | Santhosh Gowda N | S/o. Nijalingappa L<br>Jadekunte, Kaparahalali Post<br>Challakere Tq.<br>Chitradurga 577 522 | 15/12/1989 | IIIA | GM | 72.50 |
| 39 | Sandeep N | S/o. Nanjundeshwara M<br>Bommasandra village, Sugatur post,<br>Kolar Tq. & dist. 565 101 | 08/08/1989 | IIIA | GM/R | 72.40 |
| 40 | Smitha S | D/o. Late Sheshagiri U<br>C/o. K. Umeshwar, No. 228, KHB<br>Colony, 5th Block 17th E Main, 4th<br>Cross, Koramangala, Bangalore 95 | 23/10/1989 | IIA | GM/F | 72.30 |
| 41 | Kaviraj Airani | S/o. Megharaj<br>Belur post, Ranebennur Tq.<br>Haveri 581 211 | 01/12/1989 | I | I | 72.20 |
| 42 | Himachala K | S/o. Kempu Gowda DAralakuppe<br>village, Kyathanalli post,<br>Pandavapura Tq. Mandya 571 427 | 15/05/1989 | IIIA | GM | 72.10 |
| 43 | Geetha H G | D/o. Gidde gowda<br>C/o. Tharanath, No.543/2 SJP<br>Road, Near Vety. Hospital<br>Doddi Circle, K.R. Puram<br>Hassan 573 201 | 02/04/1990 | IIIA | GM/F | 71.80 |
| 44 | Vishwanath Badami | S/o. Channappa<br>Mahakuteshwar Nilay<br>Siddarameshwara Colony Mudhol,<br>Bagalkot 587 313 | 01/06/1988 | GM | GM/K | 71.70 |
| 45 | Chaithanya M | D/o. Venkatesh N V<br>C/o. K.R,.Govindappa, No. 409 17th<br>Cross, Saraswathi nagar<br>Vijayanagar, Bangalore 40 | 17/12/1988 | ST | ST/F | 71.40 |
| 46 | Bharath M | S/o. Mallikarjunaiah<br>C/o.Thimmaiah Shetty<br>Malleshwara nagara Main road,<br>Arasikere, Hassan 573 103 | 10/07/1989 | IIIB | GM | 71.30 |
| 47 | Raghavendra G | S/o. G. Ningappa<br>Near Maruthi Garadi Mane<br>Ramanagar, Hagarigommanahalli<br>Bellary 583 212 | 01/07/1988 | IIA | GM/R | 71.10 |
| 48 | Niranjana murthy C S | S/o. Shivamurthy C<br>C/o. Backward classes Welfare<br>Dept., Basavachethana, 100 Ft.<br>Road, Ravindra nagara,<br>Shimoga 577 201 | 27/07/1989 | SC | SC/K | 71.10 |
| 49 | Santhosh kumar C V | S/o. Venkataraju B G<br>Agaradahalli Camp post<br>Bhadravathi Tq. Shimoga 577227 | 03/03/1990 | SC | SC | 71.00 |
| 50 | Shashikirana G T | S/o. Thippeswamy G K<br>Vety. College Boys Hostel Room No.<br>50, Hebbal Bangalore 24 | 13/04/1990 | GM | GM | 70.60 |
| 51 | Chandrashekara Naik | S/o. Rama Naik<br>No. 164, Hosur post,<br>Shikaripura Tq., Shimoga 577 427 | 10/04/1988 | SC | SC/K | 70.30 |
| 52 | Naveenkumar P | S/o. Putte Gowda N<br>Mylara lingeshwara Nilaya 60ft.<br>Road, 7th Cross, Sapthagiri Extn.,<br>Tumkur 572102 | 20/08/1988 | I | I | 70.10 |
| 53 | Vinay kumar B N | S/o. Nagaraja3114, APK Badavane,<br>SLN Road, Holenarasipur,<br>Hassan 573211 | 16/06/1987 | IIA | GM | 70.10 |
| 54 | Rohith Hegde | S/o. Sadanand<br>Gurukrupa, House behind Patil<br>Nursing Home, 14th Block Dandeli,<br>U.K. 581 325 | 13/11/1988 | GM | GM | 69.90 |

| Sl No | Name | Address | Date of Birth | Cate-gory | Selec-tion | %age of marks (BVSc.) |
|---|---|---|---|---|---|---|
| 1 | 2 | 3 | 4 | 5 | 6 | 7 |
| 55 | Nandeesha C | S/o. Chikkanna D<br>Dep. Wildlife, Room No. 50 Vety. College Boys Hostel, Hebbal, B'lore 24 | 20/02/1990 | GM | GM | 69.50 |
| 56 | Chethan M P | S/o. Putta Shetty<br>No.21, Near Taluk Office Revenue Quarters, Abbur Road<br>Periyapatna, Mysore 571 107 | 28/07/1987 | GM | GM/K | 69.40 |
| 57 | Sumanth N | S/o. Neelakantaiah<br>Malavalli Town, Tq., Mandya 571 430 | 10/07/1988 | SC | SC | 69.40 |
| 58 | Saroja N | D/o. Narasimhaiah N C<br>Nagenahalli, Seebi Agrahara post, Sira Tq., Tumkur 572 125 | 10/12/1989 | ST | ST/F | 69.30 |
| 59 | Rakshit T M | S/o. Mylarappa<br>C/o. Basavaraj, Choudeshwari Colony, Near M G Road<br>Tarikere,Chikkamagalur 577 228 | 27/02/1989 | I | I | 68.80 |
| 60 | Yuvaraj Chavhan | S/o. Ningappa<br>No. 1726/14, Vikas nagar, 1st Main, 3rd Cross, Ranebennur,<br>Haveri 581 115 | 26/07/1988 | SC | SC | 68.70 |
| 61 | Revanasiddappa | S/o. Shankar<br>No. 11-347-1, Sharana Nilaya, Dhanagar galli, Bhrampur, Near Kori mutt, Gulbarga 585103 | 25/05/1985 | ST | ST/K | 68.60 |
| 62 | Siddaroodh Mokashi | S/o. Bheemappa Mokashi,<br>Jokkanatti post, Gokak Tq, Belgaum 591 392 | 01/08/1988 | IIA | GM/R | 68.40 |
| 63 | Sunil M G | S/o. Gopala M T<br>Horabailu, B Dodderi post Soraba Tq., Shimoga 577434 | 27/07/1988 | GM | GM | 68.20 |
| 64 | Shanaz Mahmood | D/o. Mahmood Shariff<br>Agriculturist, Channakeshava Temple road, Tarikere<br>Chikkamagalur 577 228 | 05/10/1989 | IIB | IIB/F | 68.10 |
| 65 | Rakesh K | S/o. Kempanna HC/o. Thirumalesh, Srinivasa Nilaya, No. 67, 1st main, 13thCross, MTS Layout, Kengeri Upnagar, Bangalore 560 060 | 28/05/1988 | IIIA | GM | 67.90 |
| 66 | Bhairappa Ankali | S/o. Suryakanth Ankali<br>Dept. of Wile Life, room No. 44 Vety. College boys hostel, Hebbal,<br>Bangalore 24 | 28/05/1988 | IIIB | GM | 66.80 |
| 67 | Ramanagouda Patil | S/o. Shiddanagouda Patil<br>Shivanangi post, Bijapur 586 127 | 18/11/1987 | IIA | GM/K | 66.70 |
| 68 | Seema N | D/o. Narayana Gowda B T, Police Quarters, Holehonnur post, Shimoga 577 227 | 25/04/1989 | IIIA | GM/F | 66.20 |
| 69 | Rakesh M | S/o. Maruth H R<br>No. 176/C, Sharavathi nagar<br>Shimoga 577 201 | 26/08/1988 | GM | GM | 66.00 |
| 70 | Prashanth Talawar | S/o. Sharanappa K Talawar<br>Mulasavalagi post, Sindagi Tq<br>Bijapur 577 426 | 31/07/1988 | I | I/R | 65.30 |
| 71 | Mohamed Arif | S/o. Abdul Jabbar<br>Mubeen Taj manzil,<br>3rd Cross, Khalandariya nagar,<br>H H Road Bhadravathi,<br>Shimoga 577301 | 19/04/1988 | IIB | IIB/ RS | 65.20 |

**Note:-**

1. Selections made subject are to the subject to final decision of the Hon'ble High Court cxase W.P. No. 23166-23214/2013 and 23067-082/2013
2. Selection are made subject to the decision of **IVC** recognization of Hassan & Shimoga Veterinary Colleges.
3. SC & ST candidates are selected under backlog vacancies
4. 45 GM posts excess utilized in this selection will be adjusted in future recruitment
5. Selections are made subject to the condition of verifying all the relevant original document / caste certificate verification
6. Selection are made in accordance with the provisions of special recruitment rules issued in Govt., Notification No. AHF/94/VAH/2009 dated 22.11.2012
7. Inclusion of name of candidates in this provisional list does not confer right of final selection
8. The selection committee reserves the right to review the selection of any candidate at any point of time and if found ineligible the selection is liable to be cancelled.

**GM** : General Merit
**F** : Female
**FS** : Female Shortfall
**MPS** : Ex-Military Person Shortfall
**R** : Rural
**RS** : Rural Shortfall
**K** : Kannada Medium
**KS** : Kannada Medium Shortfall

**MEMBER SECRETARY**
Departmental Selection Committee

**CHAIRMAN**
Departmental Selection Committee

# ವಿಶೇಷ ರಾಜ್ಯ ಪತ್ರಿಕೆ

| ಭಾಗ – III | ಬೆಂಗಳೂರು, ಶನಿವಾರ, ಜನವರಿ ೨೫, ೨೦೧೪ (ಮಾಘ ೫, ಶಕ ವರ್ಷ ೧೯೩೫) | ನಂ. ೬೦ |
|---|---|---|
| **Part – III** | **Bangalore, Satruday, January 25, 2014 (Magha 5, Shaka Varsha 1935)** | **No. 60** |

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

### ಅಧಿಸೂಚನೆ

**ಸಂಖ್ಯೆ: ಗ್ರಾಅಪ:200 ಜಿಪಸ 2011, ಬೆಂಗಳೂರು, ದಿನಾಂಕ: 25–01–2014**

1993 ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 310(ಎ) ಉಪ ಪ್ರಕರಣ 2 ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಹೊಸದಾಗಿ ರಾಜ್ಯ ಪಂಚಾಯಿತಿ ಪರಿಷತ್ತನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಉಪಾಧ್ಯಕ್ಷತೆಯಲ್ಲಿ ರಚಿಸಿದೆ. ಈ ಕೆಳಗೆ ನಮೂದಿಸಿರುವಂತೆ ಸದಸ್ಯರುಗಳನ್ನು ಅವರ ಹುದ್ದೆಯ ಅಧಿಕಾರಾವಧಿಯವರೆಗೆ ರಾಜ್ಯ ಪಂಚಾಯಿತಿ ಪರಿಷತ್ತಿಗೆ ನಾಮನಿರ್ದೇಶಿಸಿ ನೇಮಕ ಮಾಡಲಾಗಿದೆ.

ಪ್ರಕರಣ 310(ಎ) ರ ಉಪ ಪ್ರಕರಣ 2 (vii) ರನ್ವಯ ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಸದಸ್ಯ ಕಾರ್ಯದರ್ಶಿಯವರನ್ನಾಗಿ ನೇಮಿಸಿದೆ.

| ಕ್ರ.ಸಂ. | ಹೆಸರು ಮತ್ತು ಹುದ್ದೆ |
|---|---|
| (ಅ) | **ಸನ್ಮಾನ್ಯ ಸಚಿವರುಗಳಾದ:** |
| | 1. ಲೋಕೋಪಯೋಗಿ ಸಚಿವರು |
| | 2. ವಸತಿ ಸಚಿವರು |
| | 3. ಕೃಷಿ ರಾಜ್ಯ ಸಚಿವರು |
| | 4. ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು |
| | 5. ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು |

| | | | |
|---|---|---|---|
| (ಆ) | **ವಿಧಾನಸಭಾ ಸದಸ್ಯರುಗಳಾದ:** | | |
| | 1. ಜೆ. ಟಿ. ಪಾಟೀಲ – ಬೀಳಗಿ ಕ್ಷೇತ್ರ | | |
| | 2. ಪ್ರಿಯಾಂಕ ಎಂ. ಖರ್ಗೆ – ಚಿತ್ತಾಪುರ ಕ್ಷೇತ್ರ | | |
| | 3. ಕ್ಯಾತಸಂದ್ರ ಎನ್. ರಾಜಣ್ಣ – ಮಧುಗಿರಿ ಕ್ಷೇತ್ರ | | |
| | 4. ಜಿ. ಟಿ. ದೇವೇಗೌಡ – ಚಾಮುಂಡೇಶ್ವರಿ ಕ್ಷೇತ್ರ | | |
| | 5. ಗೋವಿಂದ ಎಂ. ಕಾರಜೋಳ – ಮುಧೋಳ ಕ್ಷೇತ್ರ | | |
| (ಇ) | **ವಿಧಾನ ಪರಿಷತ್ತಿನ ಸದಸ್ಯರುಗಳಾದ:** | | |
| | 1. ಕೋಟ ಶ್ರೀನಿವಾಸ ಪೂಜಾರಿ | | |
| | 2. ವೀರಕುಮಾರ್ ಅಪ್ಪಾಸೊ ಪಾಟೀಲ್ | | |
| (ಈ) | **ಜಿಲ್ಲಾ ಪಂಚಾಯತ್ ಅಧ್ಯಕ್ಷರು:** | | |
| | 1. ಅಧ್ಯಕ್ಷರು, ಕೊಪ್ಪಳ ಜಿಲ್ಲಾ ಪಂಚಾಯತ್ | | |
| | 2. ಅಧ್ಯಕ್ಷರು, ಗದಗ ಜಿಲ್ಲಾ ಪಂಚಾಯತ್ | | |
| | 3. ಅಧ್ಯಕ್ಷರು, ಕೋಲಾರ ಜಿಲ್ಲಾ ಪಂಚಾಯತ್ | | |
| | 4. ಅಧ್ಯಕ್ಷರು, ಉತ್ತರ ಕನ್ನಡ ಜಿಲ್ಲಾ ಪಂಚಾಯತ್ | | |
| | 5. ಅಧ್ಯಕ್ಷರು, ಚಾಮರಾಜನಗರ ಜಿಲ್ಲಾ ಪಂಚಾಯತ್ | | |
| | 6. ಅಧ್ಯಕ್ಷರು, ಬಿಜಾಪುರ ಜಿಲ್ಲಾ ಪಂಚಾಯತ್ | | |
| | 7. ಅಧ್ಯಕ್ಷರು, ರಾಯಚೂರು ಜಿಲ್ಲಾ ಪಂಚಾಯತ್ | | |
| | 8. ಅಧ್ಯಕ್ಷರು, ಮೈಸೂರು ಜಿಲ್ಲಾ ಪಂಚಾಯತ್ | | |
| | 9. ಅಧ್ಯಕ್ಷರು, ಬಳ್ಳಾರಿ ಜಿಲ್ಲಾ ಪಂಚಾಯತ್ | | |
| | 10. ಅಧ್ಯಕ್ಷರು, ಬೆಳಗಾವಿ ಜಿಲ್ಲಾ ಪಂಚಾಯತ್ | | |
| (ಉ) | **ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು:** | | |
| | **ಜಿಲ್ಲೆ** | **ತಾಲ್ಲೂಕು ಪಂಚಾಯತ್** | **ಗ್ರಾಮ ಪಂಚಾಯತ್** |
| 1 | ಬೆಳಗಾವಿ | ಅಥಣಿ | ಉಮ್ರಾಣಿ |
| 2. | ಬಿಜಾಪುರ | ಬಿಜಾಪುರ | ಹೂವಿನ ಹಿಪ್ಪರಗಿ |
| 3. | ಬಾಗಲಕೋಟೆ | ಮುಧೋಳ | ಹಲಗಲಿ |
| 4. | ಉತ್ತರ ಕನ್ನಡ | ಹೊನ್ನಾವರ | ಜೊಯ್ಡಾ |
| 5. | ಗದಗ | ನರಗುಂದ | ಗೋಗೇರಿ |
| 6. | ಹಾವೇರಿ | ಸವಣೂರು | ಹುಲ್ಲತ್ತಿ |
| 7. | ಧಾರವಾಡ | ಹುಬ್ಬಳ್ಳಿ | ಅದರಗುಂಚಿ |
| 8. | ಬೆಂಗಳೂರು ನಗರ | ಬೆಂಗಳೂರು ಪೂರ್ವ | ಸೊಂಡೇಕೊಪ್ಪ |
| 9. | ರಾಮನಗರ | ರಾಮನಗರ | ಚಿಕ್ಕಮುದಿಗೆರೆ |
| 10. | ದಾವಣಗೆರೆ | ಹರಿಹರ | ಸೊಕ್ಕೆ |
| 11. | ಚಿತ್ರದುರ್ಗ | ಚಳ್ಳಕೆರೆ | ದಿಂಡಾವರ |
| 12. | ಚಿಕ್ಕಬಳ್ಳಾಪುರ | ಗೌರಿಬಿದನೂರು | ತಳಗವಾರ |
| 13. | ತುಮಕೂರು | ತುರುವೇಕೆರೆ | ಹೊನ್ನುಡಿಕೆ |
| 14. | ಕೋಲಾರ | ಶ್ರೀನಿವಾಸಪುರ | ದೊಡ್ಡಹಸಾಳ |
| 15. | ಶಿವಮೊಗ್ಗ | ಶಿಕಾರಿಪುರ | ಹಾರ್ನಹಳ್ಳಿ |
| 16. | ಬೆಂಗಳೂರು ಗ್ರಾಮಾಂತರ | ಹೊಸಕೋಟೆ | ಬಾಶೆಟ್ಟಿಹಳ್ಳಿ |
| 17. | ಮೈಸೂರು | ಕೃಷ್ಣರಾಜನಗರ | ಹೆಮ್ಮರಗಾಲ |
| 18. | ಚಿಕ್ಕಮಗಳೂರು | ಮೂಡಿಗೆರೆ | ಮಾಚೇನಹಳ್ಳಿ |
| 19. | ದಕ್ಷಿಣ ಕನ್ನಡ | ಸುಳ್ಯ | ಚಾರ್ಮುಡಿ |
| 20. | ಮಂಡ್ಯ | ನಾಗಮಂಗಲ | ಅನಗೋಳ |

| | | | |
|---|---|---|---|
| 21. | ಉಡುಪಿ | ಉಡುಪಿ | ಪಳ್ಳಿ |
| 22. | ಹಾಸನ | ಅರಸೀಕೆರೆ | ಹಿರೀಸಾವೆ |
| 23. | ಚಾಮರಾಜನಗರ | ಗುಂಡ್ಲುಪೇಟೆ | ಸತ್ತೇಗಾಲ |
| 24. | ಕೊಡಗು | ಸೋಮವಾರಪೇಟೆ | ಕೊಣಂಜಗೇರಿ |
| 25. | ಗುಲ್ಬರ್ಗಾ | ಸೇಡಂ | ಹಂದರಗಿ |
| 26. | ಬೀದರ | ಬಸವಕಲ್ಯಾಣ | ಘಾಟಬೋರಾಳ |
| 27. | ರಾಯಚೂರು | ರಾಯಚೂರು | ಗಾಂಧಿನಗರ |
| 28. | ಕೊಪ್ಪಳ | ಕೊಪ್ಪಳ | ಕಾರಟಗಿ |
| 29. | ಬಳ್ಳಾರಿ | ಹಗರಿಬೊಮ್ಮನಹಳ್ಳಿ | ಮೋಕಾ |
| 30. | ಯಾದಗಿರಿ | ಯಾದಗಿರಿ | ಕೆಂಭಾವಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಲ್.ಸಿ. ಬಸವರಾಜು**
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| **ಭಾಗ – IV-A** | **ಬೆಂಗಳೂರು, ಶನಿವಾರ, ಜನವರಿ ೨೫, ೨೦೧೪ (ಮಾಘ ೫, ಶಕ ವರ್ಷ ೧೯೩೫)** | **ನಂ. ೬೧** |
| **Part – IV-A** | **Bangalore, Satruday, January 25, 2014 (Magha 5, Shaka Varsha 1935)** | **No. 61** |

## ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವಾಲಯ

**ಅಧಿಸೂಚನೆ**

**ಸಂ: ಉಶಿಪ್ರಸ/ಆಕಾ/479/2014, ಬೆಂಗಳೂರು, ದಿನಾಂಕ: 25–01–2014**

ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 5(1)ರನ್ವಯ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಾಧಿಕಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

| ಅಧಿಕಾರಿ ಹೆಸರು | ಪದನಾಮ | ನಾಮ ನಿರ್ದೇಶಿತ ಹುದ್ದೆ |
|---|---|---|
| ಜೆ. ಮಂಜುನಾಥ್, ಕೆ.ಎಸ್.ಎ.ಎಸ್. | ಆಪ್ತ ಕಾರ್ಯದರ್ಶಿ | ಮೇಲ್ಮನವಿ ಪ್ರಾಧಿಕಾರ |
| ಶ್ರೀ ರಾಜು ಅಡಕಳ್ಳಿ | ಮಾಧ್ಯಮ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ | ಸಾರ್ವಜನಿಕ ಮಾಹಿತಿ ಅಧಿಕಾರಿ |
| ಶ್ರೀ ಲಿಂಗರಾಜು ಎನ್.ಜಿ. | ಆಪ್ತ ಸಹಾಯಕ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ |

**ಜೆ. ಮಂಜುನಾಥ್**
ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ
ಸಚಿವರ ಆಪ್ತ ಕಾರ್ಯದರ್ಶಿ

# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| **ಭಾಗ – IV-A** | **ಬೆಂಗಳೂರು, ಸೋಮವಾರ, ಜನವರಿ ೨೭, ೨೦೧೪ (ಮಾಘ ೭, ಶಕ ವರ್ಷ ೧೯೩೫)** | **ನಂ. ೬೨** |
| **Part – IV-A** | **Bangalore, Monday, January 27, 2014 (Magha 7, Shaka Varsha 1935)** | **No. 62** |

## KARNATAKA LEGISLATIVE ASSEMBLY SECRETARIAT

**NOTIFICATION**

**No. KLA/LGA/26/LA Bill/2014, Bangalore, Dated: 27-1-2014**

The following Bill was introduced in Legislative Assembly on 27-1-2014

**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಮೂರನೇ ಅಧಿವೇಶನ**

**ಹೈದರಾಬಾದ್– ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕ, 2014**

**(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 26)**

ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿನಿಯಮ, 1991ನ್ನು (1991ರ ಕರ್ನಾಟಕ ಅಧಿನಿಯಮ 35) ನಿರಸನಗೊಳಿಸಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿನಿಯಮ, 1991ನ್ನು (1991ರ ಕರ್ನಾಟಕ ಅಧಿನಿಯಮ 35) ನಿರಸನಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಹೈದರಾಬಾದ್– ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ನಿರಸನ ಮತ್ತು ಉಳಿಸುವಿಕೆಗಳು.–** (1) ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿ ಆದೇಶ, 2013ರ ಕಂಡಿಕೆ 3ರ ಅಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಅಧಿಸೂಚನೆಯ ದಿನಾಂಕದಂದು ಮತ್ತು ಅಂದಿನಿಂದ, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 35) ನಿರಸನಗೊಳ್ಳತಕ್ಕದ್ದು.

(2) ಅಂಥ ನಿರಸನದ ಪರಿಣಾಮವಾಗಿ,–

(i) ಹೈದರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಎಲ್ಲಾ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು, ಹೈದರಾಬಾದ್ – ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಗೆ ವರ್ಗಾವಣೆಯಾಗತಕ್ಕದ್ದು;

(ii) ಹೈದರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಮಂಜೂರಾದ ಹುದ್ದೆಗಳೊಂದಿಗೆ ಎಲ್ಲಾ ಸಿಬ್ಬಂದಿ ವರ್ಗದವರು ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಯು ಮಾರ್ಪಾಟುಗಳನ್ನು ಮಾಡುವವರೆಗೆ, ಅವರು ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕಗೊಂಡಿರುವರೋ ಅವೇ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ, ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಗೆ ವರ್ಗಾವಣೆಯಾಗತಕ್ಕದ್ದು;

(iii) ನಿರಸನಗೊಂಡ ಅಧಿನಿಯಮದ ಅಡಿಯಲ್ಲಿ ಮಾಡಲಾದ ಎಲ್ಲಾ ನಿಯಮಗಳು, ಅಧಿಸೂಚನೆಗಳು ಮತ್ತು ಆದೇಶಗಳು, ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿ ಆದೇಶ, 2013ರ ಅಡಿಯಲ್ಲಿ ಹೊಸ ನಿಯಮಗಳು, ಅಧಿಸೂಚನೆಗಳು ಅಥವಾ ಆದೇಶಗಳನ್ನು ಮಾಡುವವರೆಗೆ, ಅವುಗಳನ್ನು ಸದರಿ ಆದೇಶದ ಅಡಿಯಲ್ಲಿ ಮಾಡಲಾಗಿದೆ ಎಂಬಂತೆಯೇ ಮುಂದುವರೆಯತಕ್ಕದ್ದು;

(iv) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ 3) 6ನೇ ಪ್ರಕರಣವು ಅಂಥ ನಿರಸನಕ್ಕೆ ಅನ್ವಯವಾಗತಕ್ಕದ್ದು.

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಭಾರತ ಸಂವಿಧಾನದ 371 (ಜೆ) ಅನುಚ್ಛೇದದ ಅನುಸಾರವಾಗಿ ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿ ಆದೇಶ, 2013ರ ಅಡಿಯಲ್ಲಿ ಹೈದರಾಬಾದ್– ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಯ ಸ್ಥಾಪನೆಯ ಪರಿಣಾಮವಾಗಿ,–

(i) ಹೈದರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧಿನಿಯಮ, 1991ನ್ನು (1991ರ ಕರ್ನಾಟಕ ಅಧಿನಿಯಮ 35) ನಿರಸನಗೊಳಿಸುವುದಕ್ಕಾಗಿ;

(ii) ಹೈದರಾಬಾದ್ – ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಎಲ್ಲಾ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು, ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಗೆ ವರ್ಗಾಯಿಸುವುದಕ್ಕಾಗಿ;

(iii) ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಮಂಜೂರಾದ ಹುದ್ದೆಗಳೊಂದಿಗೆ ಎಲ್ಲಾ ಸಿಬ್ಬಂದಿ ವರ್ಗದವರನ್ನು ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿಗೆ ವರ್ಗಾಯಿಸುವುದಕ್ಕಾಗಿ; ಮತ್ತು

(iv) ಹೈದರಾಬಾದ್–ಕರ್ನಾಟಕ ಪ್ರಾಂತ್ಯ ಅಭಿವೃದ್ಧಿ ಮಂಡಳಿ ಆದೇಶ, 2013ರ ಅಡಿಯಲ್ಲಿ ಹೊಸ ನಿಯಮಗಳು ಮತ್ತು ಆದೇಶಗಳು ಇತ್ಯಾದಿಗಳನ್ನು ರಚಿಸುವವರೆಗೆ ನಿರಸನಗೊಂಡ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಎಲ್ಲಾ ನಿಯಮಗಳು, ಅಧಿಸೂಚನೆಗಳು, ಆದೇಶಗಳು, ಇತ್ಯಾದಿಗಳು ಮುಂದುವರಿಯುವುದಕ್ಕಾಗಿ,–

– ಉಪಬಂಧ ಕಲ್ಪಿಸುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್. ಆರ್. ಪಾಟೀಲ್**
ಯೋಜನೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**THIRD SESSION**

# THE HYDERABAD KARNATAKA AREA DEVELOPMENT BOARD REPEAL BILL, 2014

**(L.A. Bill No. 26 of 2014)**

A Bill to repeal the Hyderabad-Karnataka Area Development Board Act, 1991 (Karnataka Act 35 of 1991).

Whereas it is expedient to repeal the Hyderabad Karnataka Area Development Board Act, 1991 (Karnataka Act 35 of 1991) for the purposes hereinafter appearing;

Be it enacted by the Karnataka State Legislature in the Sixty Fifth year of the Republic of India as follows:-

**1. Short title and commencement.-** (1) This Act may be called as the Hyderabad-Karnataka Area Development Board Repeal Act, 2014.

(2) It shall come into force at once.

**2. Repeal and Savings.-** (1) On and from the date of notification of establishment of the Hyderabad-Karnataka Region Development Board under para 3 of the Hyderabad-Karnataka Region Development Board Order, 2013, The Hyderabad-Karnataka Area Development Board Act, 1991 (Karnataka Act 35 of 1991) shall stand repealed.

(2) Consequent upon such repeal,-

(i) all assets and liabilities of the Hyderabad-Karnataka Area Development Board shall stand transferred to the Hyderabad-Karnataka Region Development Board;

(ii) all staff along with the sanctioned posts in the Hyderabad-Karnataka Area Development Board shall stand transferred to the Hyderabad-Karnataka Region Development Board with same terms and conditions in which they were appointed till modifications are made by the Hyderabad-Karnataka Region Development Board;

(iii) all rules, notifications and orders made under the repealed Act shall continue till new rules notifications or orders are made under the Hyderabad-Karnataka Region Development Board Order, 2013, as if they have been framed under the said order;

(iv) Section 6 of the Karnataka General Clauses Act, 1899 (Karnataka Act 3 of 1899) shall apply on such repeal.

## STATEMENT OF OBJECTS AND REASONS

Consequent upon establishment of the Hyderabad-Karnataka Region Development Board in the Hyderabad-Karnataka Region Development Board Order, 2013 in pursuance to Article 371(J) Constitution of the India it has become necessary to provide for,-

(i) the repeal of the Hyderabad-Karnataka Area Development Board Act, 1991 (Karnataka Act 35 of 1991);

(ii) the transfer of all the assets and liabilities of the Hyderabad-Karnataka Area Development Board to the Hyderabad-Karnataka Region Development Board;

(iii) the transfer of all staff along with the sanction posts of the Hyderabad-Karnataka Area Development Board to the Hyderabad-Karnataka Region Development Board; and

(iv) to continue all the rules, notifications, orders etc., issued under the repealed Act till the new rules and orders etc., are framed under the Hyderabad-Karnataka Region Development Board Order, 2013.

Hence the Bill.

**FINANCIAL MEMORANDUM**

There is no extra expenditure involved in the proposed Legislative measure.

**S.R. PATIL**
Minister for Planning, IT, BT,
Science and Technology

**P. OMPRAKASHA**
Secretary
Karnataka Legislative Assembly

# ವಿಶೇಷ ರಾಜ್ಯ ಪತ್ರಿಕೆ



| ಭಾಗ – IV-A | ಬೆಂಗಳೂರು, ಸೋಮವಾರ, ಜನವರಿ ೨೭, ೨೦೧೪ (ಮಾಘ ೭, ಶಕ ವರ್ಷ ೧೯೩೫) | ನಂ. ೬೩ |
|---|---|---|
| Part – IV-A | Bangalore, Monday, January 27, 2014 (Magha 7, Shaka Varsha 1935) | No. 63 |



**KARNATAKA LEGISLATIVE ASSEMBLY SECRETARIAT**

**NOTIFICATION**

**No. KLA/LGA/27/LA Bill/2014, Bangalore, Dated: 27-1-2014**

The following Bill was introduced in Legislative Assembly on 27-1-2014

**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಮೂರನೇ ಅಧಿವೇಶನ**

## ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ , 2014

**(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 27)**

ಸಹಾಯಾನುದಾನಕ್ಕೆ ಒಳಪಡುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಭತ್ಯೆ ಹಾಗೂ ಇತರ ಸೇವಾಷರತ್ತುಗಳನ್ನು ನಿಯಂತ್ರಿಸಲು ಹಾಗೂ ರಾಜ್ಯದ ಆರ್ಥಿಕ ಹೊಣೆಗಾರಿಕೆಯನ್ನು ಮಿತಿಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳಿಗಾಗಿ ಒಂದು ವಿಧೇಯಕ.

ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಮತ್ತು ವ್ಯವಸ್ಥಾಪನೆಗಳ ಹೊರೆಯನ್ನು ಕಡಿಮೆ ಮಾಡಲು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವೇತನ ಅನುದಾನವನ್ನು ಮಾಡುವ ಮೂಲಕ ರಾಜ್ಯ ಸರ್ಕಾರವು ಹಲವಾರು ಖಾಸಗಿ ಶೈಕ್ಷಣಿಕ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಿಕೊಂಡಿರುವುದರಿಂದ;

ಮತ್ತು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ವ್ಯಾಪ್ತಿಯೊಳಗೆ ಬರುವ ಅನುದಾನಿತ ಸಂಸ್ಥೆಗಳ ಸಿಬ್ಬಂದಿಯ ನಿವೃತ್ತಿ ವೇತನ ಸೌಲಭ್ಯಗಳನ್ನು ನಿಯಂತ್ರಿಸಲು ಕರ್ನಾಟಕ ರಾಜ್ಯ ಅನುದಾನಿತ ಶಾಲೆಗಳ ಸಿಬ್ಬಂದಿಗಳ ವಂತಿಗೆ ಭವಿಷ್ಯನಿಧಿ – ವಿಮೆ – ನಿವೃತ್ತಿ ವೇತನ ಯೋಜನೆ (ತ್ರಿವಿಧ ಸೌಲಭ್ಯ ಯೋಜನೆ) (Triple Benefit Scheme) ನಿಯಮಗಳನ್ನು ರಾಜ್ಯ ಸರ್ಕಾರವು ದಿನಾಂಕ 24.08.1963ರ ಆದೇಶ ಸಂಖ್ಯೆ: ಇಡಿ 65 ಎಸ್ ಇ ಎಸ್ 62ನ್ನು ದಿನಾಂಕ 01.04.1963ರಿಂದ ಜಾರಿಗೆ ಬರುವಂತೆ ಹೊರಡಿಸಿದ್ದು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ರಾಜ್ಯ–ಅನುದಾನ ಸಂಸ್ಥೆಯಲ್ಲಿನ ತಾತ್ಕಾಲಿಕ, ಸ್ಥಾನಪನ್ನಾ ಅಥವಾ ಖಾಯಂ ಆದ ಎಲ್ಲಾ ಹಿಂದಿನ ಸೇವೆಯ ಅರ್ಹತಾದಾಯಕ ಸೇವಾವಧಿಯನ್ನು ಗಣನೆಗೆ ತೆಗೆದುಕೊಳ್ಳುವಂತೆ ನಿರ್ದೇಶಿಸಿರುವುದರಿಂದ,

ಮತ್ತು, ಸರ್ಕಾರವು, ವಿದ್ಯಾರ್ಥಿಗಳ ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯಗಳ ಸಮರಸ ಬೆಳವಣಿಗೆಗೆ ಪೋಷಣೆ ನೀಡುವ ಮತ್ತು ಶಿಕ್ಷಣದ ಮೂಲಕ ವೈಜ್ಞಾನಿಕ ದೃಷ್ಟಿಕೋನವನ್ನು ಹಾಗೂ ಸರ್ವಧರ್ಮ ಸಮಭಾವವನ್ನು ಬೆಳೆಸುವ ಉದ್ದೇಶದಿಂದ ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಆರೋಗ್ಯಕರ ಶಿಕ್ಷಣ ಪದ್ಧತಿಗಳ ಬೋಧನೆ, ಶೈಕ್ಷಣಿಕ ಗುಣಮಟ್ಟದ ನಿರ್ವಹಣೆ ಮತ್ತು ಸುಧಾರಣೆ – ಇವುಗಳ ಬಗ್ಗೆ ಮತ್ತು ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳನ್ನು ಇನ್ನಷ್ಟು ಉತ್ತಮ ರೀತಿಯಲ್ಲಿ ಸಂಘಟಿಸುವ, ಶಿಸ್ತಿಗೆ ಹಾಗೂ ನಿಯಂತ್ರಣಕ್ಕೆ ಒಳಪಡಿಸುವ ಬಗ್ಗೆ ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು ರೂಪಿಸಿದ್ದು ಸದರಿ ಅಧಿನಿಯಮವು ದಿನಾಂಕ 30.05.1995ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 2 ಎಂಇಎಸ್ 95ರ ಅನ್ವಯ 1.6.1995ರಿಂದ ಜಾರಿಗೆ ಬಂದಿದ್ದು ಅದರ 146(3)ನೇ ಪ್ರಕರಣದಲ್ಲಿ ಒಳಗೊಂಡಿರುವ ಉಳಿಸುವಿಕೆ ಖಂಡದ ಕಾರಣದಿಂದಾಗಿ ತ್ರಿವಿಧ ಸೌಲಭ್ಯ ಯೋಜನೆ (ಟಿಬಿಎಸ್) ನಿಯಮಗಳು ಸದರಿ ಅಧಿನಿಯಮದ ಅವಿಭಾಜ್ಯ ಅಂಗವಾಗಿರುವುದರಿಂದ; ಮತ್ತು, ವೇತನಕ್ಕಾಗಿ ಅನುದಾನರಹಿತ ಸೇವೆಯನ್ನು (non-grant service) ಪರಿಗಣಿಸದಿರುವುದನ್ನು ರಿಟ್ ಅರ್ಜಿ ಸಂಖ್ಯೆ: 226–228/1998ರಲ್ಲಿ ಪ್ರಶ್ನಿಸಲಾಗಿದ್ದು, ರಿಟ್ ಅರ್ಜಿದಾರರು ಕೋರಿದ ಪರಿಹಾರಗಳನ್ನು ತಿರಸ್ಕರಿಸುವುದರ ಮೂಲಕ 13.08.1998ರಂದು ಸದರಿ ರಿಟ್ ಅರ್ಜಿಗಳನ್ನು ವಜಾ ಮಾಡಿರುವುದರಿಂದ;

ಮತ್ತು, ಸರ್ಕಾರವು ದಿನಾಂಕ 12.07.2001ರ ಪತ್ರ ಸಂಖ್ಯೆ: ಇಡಿ 130 ಪಿಎಂಸಿ 99ರಲ್ಲಿ, ನಿವೃತ್ತಿ ವೇತನ ಸೌಲಭ್ಯಗಳಿಗಾಗಿ ಅನುದಾನರಹಿತ (Unaided) ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದೆಂದು ನಿರ್ದೇಶನವನ್ನು ನೀಡಿರುವುದರಿಂದ;

ಮತ್ತು, ನಿವೃತ್ತಿವೇತನ ಮತ್ತು ರಜೆಯ ಉದ್ದೇಶಗಳಿಗಾಗಿ ಅನುದಾನರಹಿತ ಸೇವೆಯನ್ನು ಪರಿಗಣಿಸತಕ್ಕದ್ದಲ್ಲವೆಂಬುದನ್ನು ಸ್ಪಷ್ಟೀಕರಿಸುವುದಕ್ಕಾಗಿ ಸರ್ಕಾರವು ಇಡಿ 90 ಪಿಎಂಸಿ 99 ಎಂಬ ಸಂಖ್ಯೆಯುಳ್ಳ ಸುತ್ತೋಲೆಯನ್ನು ದಿನಾಂಕ 20.09.2003ರಂದು ಹೊರಡಿಸಿರುವುದರಿಂದ;

ಮತ್ತು, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ವೇತನ, ರಜೆ, ನಿವೃತ್ತಿವೇತನ ಮತ್ತು ಇತರ ಯಾವುದೇ ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸತಕ್ಕದ್ದಲ್ಲವೆಂದು ಹೇಳಿರುವ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಖಾಸಗಿ ಅನುದಾನಿತ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು) ನಿಯಮಗಳು, 1999ರ ನಿಯಮ 3 (1)(ಬಿ) ಮತ್ತು (ಸಿ) ಯಲ್ಲಿ ನೀಡಿರುವ ನಿರ್ದೇಶನಗಳನ್ನು, ಪುನರುಚ್ಚರಿಸುತ್ತಾ ಸರ್ಕಾರವು ದಿನಾಂಕ: 10.04.2006ರಂದು ಆದೇಶ ಸಂಖ್ಯೆ: ಇಡಿ 674 ಎಸ್‌ಇಡಬ್ಲ್ಯು 2005ನ್ನು ಹೊರಡಿಸಿರುವುದರಿಂದ;

ಮತ್ತು, ಶ್ರೀ ಎಚ್. ಪೀಟರ್ ರವರು ರಿಟ್ ಅರ್ಜಿ ಸಂಖ್ಯೆ: 10399/2004 ರಲ್ಲಿ ನಿವೃತ್ತಿ ವೇತನಗಳಿಗಾಗಿ ಅನುದಾನರಹಿತ ಸೇವಾವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದನ್ನು ಪ್ರಶ್ನಿಸಿದ್ದು, ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ನಿವೃತ್ತಿವೇತನ ಸೌಲಭ್ಯಗಳನ್ನು ಲೆಕ್ಕ ಮಾಡುವಾಗ ಅನುದಾನರಹಿತ ಅವಧಿಯನ್ನು ಪರಿಗಣಿಸತಕ್ಕದ್ದೆಂದು ನಿರ್ದೇಶಿಸಿ ಸದರಿ ರಿಟ್ ಅರ್ಜಿಯನ್ನು 01.09.2006ರಂದು ಪುರಸ್ಕರಿಸಿರುವುದರಿಂದ;

ಮತ್ತು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 145ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸರ್ಕಾರವು, ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ)ನಿಯಮಗಳು, 2006ನ್ನು ರೂಪಿಸಿದೆ. ಸದರಿ ನಿಯಮಗಳ 21ನೇ ನಿಯಮದ (2) ಮತ್ತು (3)ನೇ ಉಪ ನಿಯಮಗಳು ಈ ಕೆಳಗಿನಂತೆ ಇರುವುದರಿಂದ, ಎಂದರೆ:–

"(2) ಖಾಸಗಿ ಅನುದಾನಿತ ಪದವಿ–ಪೂರ್ವ ಕಾಲೇಜುಗಳಲ್ಲಿ ಅಂಥ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಮತ್ತು ವ್ಯಕ್ತಿಗಳು, ಸರ್ಕಾರವು ಸಹಾಯಾನುದಾನವನ್ನು ಮಂಜೂರು ಮಾಡಿದ ದಿನಾಂಕದಿಂದ ಮಾತ್ರವೇ ಸಹಾಯಾನುದಾನಕ್ಕೆ ಅರ್ಹರಾಗಿರತಕ್ಕದ್ದು ಮತ್ತು ಅನುದಾನರಹಿತ ಸೇವೆಯ ಹಿಂದಿನ ಅವಧಿಯನ್ನು ನಿವೃತ್ತಿ ವೇತನವು ಒಳಗೊಂಡಂತೆ ಯಾವುದೇ ವೇತನ ನಿಗದಿ, ವೇತನ ಬಡ್ತಿ, ರಜೆ, ಜ್ಯೇಷ್ಠತೆ ಮತ್ತು ಇತರ ಸೇವಾ ಸೌಲಭ್ಯಗಳಿಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಅನುದಾನಿತ ಪದವಿಪೂರ್ವ ಕಾಲೇಜಿನ ಒಬ್ಬ ಸಿಬ್ಬಂದಿಗೆ ಸಹಾಯಾನುದಾನ ವೇತನವನ್ನು ಮಂಜೂರು ಮಾಡಿರುವ ಪರಿಣಾಮವಾಗಿ, ಅಂಥ ಒಬ್ಬ ಸಿಬ್ಬಂದಿಗೆ ಮೂಲವೇತನವನ್ನು ಆ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿಯ ಕನಿಷ್ಠಕ್ಕೆ ನಿಗದಿಪಡಿಸತಕ್ಕದ್ದು ಮತ್ತು ಅನುದಾನರಹಿತ ಸೇವೆಯಲ್ಲಿನ ಮೊದಲಿನ ಅವಧಿಯ ಸಂಬಂಧದಲ್ಲಿ ಕಾಲ್ಪನಿಕವಾಗಲೀ ಅಥವಾ ಅನ್ಯಥಾ ಯಾವುದೇ ಹಣಕಾಸಿನ ಪ್ರಯೋಜನಗಳಿಗೆ ಆತನು ಅರ್ಹನಾಗಿರುವುದಿಲ್ಲ."

ಮತ್ತು, ರಿಟ್ ಅರ್ಜಿ ಸಂಖ್ಯೆ: 10399/2004ರಲ್ಲಿ ಮಾಡಲಾದ ದಿನಾಂಕ 01.09.2006ರ ಆದೇಶದ ವಿರುದ್ಧ ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದ ವಿಭಾಗ ಪೀಠದ ಮುಂದೆ ರಾಜ್ಯವು ಸಲ್ಲಿಸಿದ ರಿಟ್ ಅಪೀಲು: ಸಂಖ್ಯೆ 291/2007 ತಿರಸ್ಕೃತವಾಗಿದ್ದು, ಸರ್ವೋಚ್ಚ ನ್ಯಾಯಾಲಯದ ಮುಂದೆ ರಾಜ್ಯ ಸರ್ಕಾರವು ಸಲ್ಲಿಸಿದ ವಿಶೇಷ ಅನುಮತಿ ಅರ್ಜಿಯೂ 09.05.2011ರಂದು ವಜಾಗೊಂಡಿರುವುದರಿಂದ;

ಮತ್ತು, ನಿವೃತ್ತಿ ವೇತನ ಪ್ರಯೋಜನಗಳಿಗಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದನ್ನು ರಿಟ್ ಅರ್ಜಿ ಸಂಖ್ಯೆ: 126/2008 ಮತ್ತು ರಿಟ್ ಅರ್ಜಿ ಸಂಖ್ಯೆ: 15025/2006ರಲ್ಲಿ ಪ್ರಶ್ನಿಸಲಾಗಿದ್ದು ಸದರಿ ರಿಟ್ ಅರ್ಜಿಗಳು ರಾಜ್ಯವು ಸಲ್ಲಿಸಿದ ರಿಟ್ ಅಪೀಲುಗಳೊಂದಿಗೆ ಸಂಬಂಧಿಸಿದವುಗಳಾಗಿದ್ದು ಸದರಿ ರಿಟ್ ಅರ್ಜಿಗಳನ್ನು 03.11.2009ರಂದು ಪುರಸ್ಕರಿಸಿರುವುದರಿಂದ;

ಮತ್ತು, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ವೇತನ, ರಜೆ, ನಿವೃತ್ತಿವೇತನ ಮತ್ತು ಇತರ ಯಾವುದೇ ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸತಕ್ಕದ್ದಲ್ಲವೆಂದು ಹೇಳಿರುವ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಖಾಸಗಿ ಅನುದಾನಿತ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು) ನಿಯಮಗಳು, 1999ರ ನಿಯಮ 3 (1)(ಬಿ) ಮತ್ತು (ಸಿ) ಯಲ್ಲಿ ನೀಡಿರುವ ನಿರ್ದೇಶನಗಳನ್ನು, ಮತ್ತೊಮ್ಮೆ ಪುನರುಚ್ಚರಿಸುತ್ತಾ ಸರ್ಕಾರವು ದಿನಾಂಕ 13.03.2009ರ ಸುತ್ತೋಲೆ ಸಂಖ್ಯೆ ಇಡಿ 156 ಪಿಎಂಸಿ 2005ನ್ನು ಹೊರಡಿಸಿರುವುದರಿಂದ;

ಮತ್ತು, ವೇತನ ನಿಗಧಿಗಾಗಿ ಅನುದಾನರಹಿತ ಅವಧಿಯು ಪರಿಗಣಿತವಲ್ಲವೆಂಬುದನ್ನು ರಿಟ್ ಅರ್ಜಿ ಸಂಖ್ಯೆ: 25447/2010ರಲ್ಲಿ ಪ್ರಶ್ನಿಸಲಾಗಿದ್ದು ದಿನಾಂಕ 16.08.2010ರಂದು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಯಿತು. ರಾಜ್ಯವು, ದಿನಾಂಕ 16.08.2010ರ ಆದೇಶದ ವಿರುದ್ಧವಾಗಿ ರಿಟ್ ಅಪೀಲು 4788/2010ನ್ನು ಸಲ್ಲಿಸಿದ್ದು ಸದರಿ ರಿಟ್ ಅಪೀಲನ್ನು ಮಾನ್ಯ ಉಚ್ಚನ್ಯಾಯಾಲಯದ ವಿಭಾಗ ಪೀಠವು ವಜಾಮಾಡಿತು ಮತ್ತು ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) (ಸಿಸಿ) ಸಂಖ್ಯೆ 7365/2012ನ್ನೂ 02.07.2012ರಂದು ವಜಾಮಾಡಿತು. ವಿಶೇಷ ಅನುಮತಿ ಅರ್ಜಿ (ಸಿಸಿ) ಸಂಖ್ಯೆ: 7365/2012ರಲ್ಲಿ ಹೊರಡಿಸಿದ ಆದೇಶದ ವಿರುದ್ಧ ರಾಜ್ಯವು ಸಲ್ಲಿಸಿದ ಪುನರಾವಲೋಕನ ಅರ್ಜಿ ಸಂಖ್ಯೆ: 2364/2012 ಕೂಡಾ 06.12.2012ರಂದು ವಜಾಗೊಂಡಿದ್ದು, ತತ್ಪರಿಣಾಮವಾಗಿ, ಕರ್ನಾಟಕ ಪದವಿ–ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ ನಿಯಮ 21(2) ಮತ್ತು (3) ರಲ್ಲಿ ನೀಡಲಾದ ನಿರ್ದೇಶನಗಳ ವಿರುದ್ಧವಾಗಿ ರಿಟ್ ಅರ್ಜಿ ಸಂಖ್ಯೆ: 25447/2010ರಲ್ಲಿ ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯದ ಆದೇಶಗಳನ್ನು ಪಾಲಿಸಬೇಕಾದ ಅನಿವಾರ್ಯ ಪರಿಸ್ಥಿತಿಯು ಬಂದೊದಗಿರುವುದರಿಂದ;

ಮತ್ತು, ದಿನಾಂಕ: 03.11.2009ರ ಆದೇಶವನ್ನು ಪ್ರಶ್ನಿಸಿ ಭಾರತದ ಮಾನ್ಯ ಸರ್ವೋಚ್ಚನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿ(ಎಸ್‌ಎಲ್‌ಪಿ) ಸಂಖ್ಯೆ: 22176–22186/10 ಇದು ರಾಜ್ಯವು ಸಲ್ಲಿಸಿರುವ ಇತರ ಎಸ್‌ಎಲ್‌ಪಿಗಳೊಂದಿಗೆ ಸಂಬಂಧಿಸಿದವುಗಳಾಗಿದ್ದು ಸದರಿ ಎಸ್‌ಪಿಲ್‌ಪಿಗಳೂ ದಿನಾಂಕ 21.08.2013ರಂದು ವಜಾಗೊಂಡಿರುವುದರಿಂದ;

ಮತ್ತು, ಸರ್ಕಾರವು, ದಿನಾಂಕ:18.08.1976ರ ಆದೇಶ ಸಂಖ್ಯೆ: ಇಡಿ 176 ಯುಪಿಸಿ 75ರಲ್ಲಿ, 01.04.1970ರಿಂದ ಜಾರಿಗೆ ಬರುವಂತೆ ಉನ್ನತ ಶಿಕ್ಷಣದ ವ್ಯಾಪ್ತಿಯೊಳಗೆ ಬರುವ ಅನುದಾನಿತ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಸೌಲಭ್ಯಗಳನ್ನು ನಿಯಂತ್ರಿಸಲು, ಕರ್ನಾಟಕ ರಾಜ್ಯ ಅನುದಾನಿತ ಕಾಲೇಜು ಮತ್ತು ತಾಂತ್ರಿಕ ಸಂಸ್ಥೆಗಳ ಸಿಬ್ಬಂದಿಗಳ ತ್ರಿವಿಧ ಸೌಲಭ್ಯ ಯೋಜನೆ (ನಿವೃತ್ತಿ ವೇತನ, ವಿಮೆ ಮತ್ತು ವ್ಯವಸ್ಥಾಪನಾ ವಂತಿಗೆ) ನಿಯಮಗಳು, 1976ನ್ನು (ಸಂಕ್ಷಿಪ್ತವಾಗಿ ಟಿಬಿಎಸ್ ನಿಯಮಗಳು ಎನ್ನುವರು) ಹೊರಡಿಸಿದ್ದು, ಅದು ಟಿಬಿಎಸ್ ನಿಯಮಗಳ ನಿಯಂತ್ರಣಕ್ಕೊಳಪಡುವ ಸಹಾಯಾನುದಾನಿತ

ಸಂಸ್ಥೆಗಳಲ್ಲಿ ಕ್ರಮಬದ್ಧವಾಗಿ ಮತ್ತು ಪೂರ್ಣಕಾಲಿಕ ಹುದ್ದೆಗಳಲ್ಲಿ ಸಲ್ಲಿಸಿದ ಹಿಂದಿನ ಎಲ್ಲಾ ಸೇವೆಯನ್ನು, ಅರ್ಹತಾದಾಯಕ ಸೇವಾವಧಿಯನ್ನು ಲೆಕ್ಕ ಹಾಕುವುದಕ್ಕಾಗಿ ಪರಿಗಣಿಸತಕ್ಕದ್ದೆಂದು ನಿರ್ದೇಶನ ನೀಡಿರುವುದರಿಂದ;

ಮತ್ತು, ಸರ್ಕಾರವು, ದಿನಾಂಕ 05.04.1991ರ ಸರ್ಕಾರಿ ಆದೇಶ ಸಂಖ್ಯೆ ಇಡಿ 15 ಯುಇಸಿ 89ರಲ್ಲಿ, ಪ್ರಥಮ ದರ್ಜೆ (ಪದವಿ)ಯಲ್ಲಿನ, ಎಂದರೆ, ಸರ್ಕಾರಿ ಕಾಲೇಜುಗಳ ಮತ್ತು 01.01.1986ರಿಂದ ಜಾರಿಗೆ ಬರುವಂತೆ ಕಾಲೇಜು ಶಿಕ್ಷಣ ಇಲಾಖೆಯ ಅಡಿಯಲ್ಲಿ ಸಹಾಯಾನುದಾನ ಸಂಹಿತೆಯ ಅನ್ವಯ ಸರ್ಕಾರದ ಅನುದಾನಿತ ಕಾಲೇಜುಗಳ ಗ್ರಂಥಪಾಲರು ಮತ್ತು ದೈಹಿಕ ಶಿಕ್ಷಣ ಸಿಬ್ಬಂದಿಗಳಿಗೆ ಪರಿಷ್ಕೃತ 1986ರ ವಿಶ್ವವಿದ್ಯಾಲಯ ಅನುದಾನಗಳ ಆಯೋಗ ವೇತನ ಶ್ರೇಣಿಗಳನ್ನು ಮಂಜೂರು ಮಾಡಿದ್ದು ಇತರ ವಿಷಯಗಳ ಜೊತೆಗೆ ನೌಕರಿ ಮುಂಬಡ್ತಿ ಯೋಜನೆಯನ್ನು (Career Advancement Scheme) ಅನುದಾನಿತ ಕಾಲೇಜುಗಳ ಗ್ರಂಥಪಾಲರು ಮತ್ತು ದೈಹಿಕ ಶಿಕ್ಷಣ ಸಿಬ್ಬಂದಿಗಳಿಗೆ ವಿಸ್ತರಿಸಿರುವುದರಿಂದ;

ಮತ್ತು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 145ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರವು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಅನುದಾನಿತ ಶಿಕ್ಷಣದ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳ ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು) ನಿಯಮಗಳು, 2001 ಎನ್ನುವ ನಿಯಮಗಳನ್ನು ಹೊರಡಿಸಿದೆ. ಸದರಿ ನಿಯಮಗಳ ನಿಯಮ 3(1)(ಬಿ) ಮತ್ತು 3(1) (ಸಿ)ಯ ಪರಂತುಕದಲ್ಲಿ, ವೇತನ, ರಜೆ, ನಿವೃತ್ತಿ ವೇತನ ಮತ್ತು ಯಾವುದೇ ಇತರ ಸೇವಾ ಸೌಲಭ್ಯಗಳಿಗಾಗಿ, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸತಕ್ಕದ್ದಲ್ಲವೆಂದು ನಿರ್ದೇಶನವನ್ನು ನೀಡಿರುವುದರಿಂದ;

ಮತ್ತು, ಸಕ್ಷಮ ಪ್ರಾಧಿಕಾರಗಳು/ನಿಕಾಯಗಳು ಹೊರಡಿಸಿದ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸುವುದಕ್ಕೆ ಒಳಪಟ್ಟು ಸ್ವಯಂ ಚಾಲಿತ ಮುಂಬಡ್ತಿ ಯೋಜನೆ (Automatic Advancement Scheme) ಮತ್ತು ನೌಕರಿ ಮುಂಬಡ್ತಿ ಯೋಜನೆಗಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕಹಾಕುವ ಉದ್ದೇಶದಿಂದ ಹೊರಡಿಸಲಾದ ದಿನಾಂಕ 03.06.2003ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 25 ಯುಪಿಸಿ 2001ರಲ್ಲಿ ನೀಡಲಾದ ನಿರ್ದೇಶನಗಳ ಒಂದು ಅನುದ್ದೇಶಿತ ಅರ್ಥವಿವರಣೆಯ ಮೂಲಕ ಸ್ವಯಂ ಚಾಲಿತ ಮುಂಬಡ್ತಿ ಯೋಜನೆ ಮತ್ತು ನೌಕರಿ ಮುಂಬಡ್ತಿ ಯೋಜನೆಯ ಉದ್ದೇಶಕ್ಕಾಗಿ, ಸಹಾಯಾನುದಾನಕ್ಕೆ ಒಳಪಡುವ ದಿನಾಂಕಕ್ಕೆ ಮೊದಲು ಖಾಸಗಿ ಕಾಲೇಜುಗಳ ಮತ್ತು ತಾಂತ್ರಿಕ ಸಂಸ್ಥೆಗಳ ಸಿಬ್ಬಂದಿಯು ಸಲ್ಲಿಸಿದ ಸೇವೆಯನ್ನು ಸಹ ಪರಿಗಣನೆಗೆ ತೆಗೆದುಕೊಂಡಿರುವುದರಿಂದ;

ಮತ್ತು ಸ್ವಯಂ ಚಾಲಿತ ಮುಂಬಡ್ತಿ ಯೋಜನೆ, ನೌಕರಿ ಮುಂಬಡ್ತಿ ಯೋಜನೆ ಮತ್ತು ನಿವೃತ್ತಿ ವೇತನಕ್ಕಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕ ಹಾಕದಿರುವುದನ್ನು ರಿಟ್ ಅರ್ಜಿ ಸಂಖ್ಯೆಗಳು: 14676/2001, 871/2004, 19431/2005 ಮತ್ತು 5145/2007 ಇವುಗಳಲ್ಲಿ ಕೆಲವು ಅನುದಾನಿತ ಸಿಬ್ಬಂದಿಗಳು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ತ್ರಿವಿಧ ಸೌಲಭ್ಯ ಯೋಜನೆ (Triple Benefit Scheme) ನಿಯಮಗಳು ಮತ್ತು ಸರ್ಕಾರಿ ಆದೇಶಗಳು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 87ನೇ ಪ್ರಕರಣಕ್ಕೆ ಅನುಗುಣವಾಗಿಲ್ಲವೆಂದು, ಅದಕ್ಕಾಗಿ, ಟಿಬಿಎಸ್ ನಿಯಮಗಳ ಅನುಸಾರವಾಗಿ, ಅನುದಾನಿತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರವೇ ಅರ್ಹತಾ ಸೇವೆಗಾಗಿ ಪರಿಗಣಿಸುವ ಸರ್ಕಾರದ ವಾದವನ್ನು ತಿರಸ್ಕರಿಸುವ ಮೂಲಕ, ಮಾನ್ಯ ಉಚ್ಚ ನ್ಯಾಯಾಲಯವು ಅನುದಾನರಹಿತ ಅವಧಿಗಾಗಿ ವೇತನ ಬಡ್ತಿಗಳು ಮತ್ತು ಬಡ್ತಿಗಳನ್ನು ಒಳಗೊಂಡಂತೆ, ಪಡೆದ ವಾಸ್ತವಿಕ ಉಪಲಬ್ಧಿಗಳ ಆಧಾರದ ಮೇಲೆ ಪ್ರಾರಂಭದ ನೇಮಕಾತಿಯಿಂದ ಸೇವೆಯನ್ನು ಲೆಕ್ಕಹಾಕಬೇಕೆಂಬ ನಿರ್ದೇಶನವನ್ನು ನೀಡುವ ಮೂಲಕ 13.10.2006 ಮತ್ತು 12.12.2007ರಂದು ರಿಟ್ ಅರ್ಜಿಗಳನ್ನು ಪುರಸ್ಕರಿಸಿರುವುದರಿಂದ;

ಮತ್ತು, ರಿಟ್ ಅರ್ಜಿ ಸಂಖ್ಯೆಗಳು 14676/2001, 871/2004, 19431/2005 ಮತ್ತು 5145/2007ರಲ್ಲಿ ಮಾಡಲಾದ ದಿನಾಂಕ 13.10.2006 ಮತ್ತು 12.12.2007ರ ಆದೇಶಗಳಿಗೆ ವಿರುದ್ಧವಾಗಿ ಸರ್ಕಾರವು ಅಪೀಲುಗಳನ್ನು ಸಲ್ಲಿಸಿದ್ದು, ದಿನಾಂಕ 03.11.2009ರಂದು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು, ರಾಜ್ಯ ಸರ್ಕಾರವು ಸಲ್ಲಿಸಿದ ರಿಟ್ ಅಪೀಲು ಸಂಖ್ಯೆ: 450/2007, 848/2008 ಇವುಗಳನ್ನು ಅಂತಹುದೇ ಇತರ ರಿಟ್ ಅರ್ಜಿಗಳೊಂದಿಗೆ ಜೋಡಿಸಿ ಈ ಮುಂದಿನ ಆದೇಶವನ್ನು ಹೊರಡಿಸಿರುವುದರಿಂದ, ಎಂದರೆ:–

"ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ, ರಾಜ್ಯವು ಸಲ್ಲಿಸಿದ ರಿಟ್ ಅಪೀಲುಗಳನ್ನು ವಜಾಮಾಡತಕ್ಕದ್ದು ಮತ್ತು ರಿಟ್ ಅರ್ಜಿಗಳನ್ನು ಪುರಸ್ಕರಿಸತಕ್ಕದ್ದು. ಸಮಗ್ರ (ಅಬ್ಸಲ್ಯೂಟ್) ನಿಯಮವನ್ನು ಮಾಡಲಾಗಿದೆ. ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯೊಳಗೆ ಪ್ರತಿಯೊಬ್ಬ ಉಪನ್ಯಾಸಕರು/ಶಿಕ್ಷಕರು ರಿಟ್ ಅರ್ಜಿಗಳನ್ನು ಸಲ್ಲಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಪಾವತಿಸತಕ್ಕ ಪ್ರತಿವರ್ಷಕ್ಕೆ ಶೇಕಡಾ 6ರ ದರದಲ್ಲಿ ಬಡ್ಡಿಯೊಂದಿಗೆ ನಿವೃತ್ತಿವೇತನ ಮತ್ತು ಉಪದಾನವನ್ನೂ ಒಳಗೊಂಡಂತೆ ಅವರ ನಿವೃತ್ತಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಅನ್ವಯವಾಗುವ ಸಂಬಂಧಪಟ್ಟ ನಿಯಮಗಳಿಗೆ ಅನುಸಾರವಾಗಿ ಆದೇಶಗಳನ್ನು ಹೊರಡಿಸತಕ್ಕದ್ದು ಹಾಗೂ ಪ್ರತಿಯೊಬ್ಬ ಅರ್ಜಿದಾರನ ಪ್ರಕರಣವನ್ನು ಪರಿಶೀಲಿಸತಕ್ಕದ್ದು ಎಂದು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ."

ಮತ್ತು, ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) ಸಂಖ್ಯೆ: 22176–22186/2010ರಲ್ಲಿ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿದ ಅಪೀಲನ್ನು ಇತರ ಅಂತಹುದೇ ವಿಶೇಷ ಅನುಮತಿ ಅರ್ಜಿಗಳಿಗೆ ಜೋಡಣೆ ಮಾಡಿದ್ದು ಅವುಗಳನ್ನು 21.08.2013ರಂದು ವಜಾಮಾಡಲಾಗಿರುವುದರಿಂದ;

ಮತ್ತು, ತರುವಾಯದಲ್ಲಿ ಸಹಾಯಾನುದಾನದ ಅಡಿಯಲ್ಲಿ ತರಲಾದ ಅನುದಾನರಹಿತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕಾಗಿ ಸೇರಿಸಿಕೊಳ್ಳುವುದರಲ್ಲಿ ಯಾವುದೇ ಸಮರ್ಥನೆಯಿರುವುದಿಲ್ಲ, ಹಾಗೆ ಸೇರಿಸಿಕೊಳ್ಳುವುದು, ನಿವೃತ್ತಿ ವೇತನ ನಿಯಮಗಳಲ್ಲಿ ಒಳಗೊಳ್ಳದ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ಆಗುತ್ತದೆ ಮತ್ತು ಅದು ಸರ್ಕಾರವು ಉದ್ದೇಶಿಸದೇ ಇದ್ದ ಸಹಾಯಾನುದಾನಕ್ಕೆ ಸೇರಿಸಿಕೊಳುವುದು, ಪೂರ್ವಾನ್ವಯ ಪರಿಣಾಮವನ್ನು ನೀಡಿದಂತೆಯೂ ಆಗುವುದರಿಂದ;

ಮತ್ತು, ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯು ಅನುದಾನರಹಿತ ಅವಧಿಯಲ್ಲಿ ಗಳಿಸಿದ ವೇತನ ಬಡ್ತಿಗಳನ್ನು, ಸಹಾಯಾನುದಾನವನ್ನು ಬಿಡುಗಡೆಗೊಳಿಸುವುದಕ್ಕೆ ಹಾಗೂ ಸ್ವಯಂ ಚಾಲಿತ ಮುಂಬಡ್ತಿ ಯೋಜನೆಗಾಗಿ, ನೌಕರಿ ಮುಂಬಡ್ತಿ ಯೋಜನೆಗಾಗಿ ಮತ್ತು ನಿವೃತ್ತಿ ವೇತನದ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಂಡಲ್ಲಿ, ಅದು ರಾಜ್ಯದ ಬೊಕ್ಕಸಕ್ಕೆ ಬಹುದೊಡ್ಡ ಆರ್ಥಿಕ ಪರಿಣಾಮವನ್ನು ಒಳಗೊಂಡಿರುವುದರಿಂದ;

ಮತ್ತು, ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಸರ್ಕಾರವು ವಿಷಯವನ್ನು ಪುನರಾವಲೋಕನೆ ಮಾಡಿ, ಸಹಾಯಾನುದಾನಕ್ಕೆ ಸೇರುವ ದಿನಾಂಕದಂದು ರಾಜ್ಯದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ಸಹಾಯಾನುದಾನವನ್ನು ವಿಸ್ತರಿಸುವ ಮತ್ತು ಹುದ್ದೆಗಳಿಗೆ ಮಂಜೂರಾದ ಸಹಾಯಾನುದಾನದಷ್ಟರಮಟ್ಟಿಗೆ ಮುಂಬಡ್ತಿ ಯೋಜನೆಗಳ ಮೇಲೆ ರಾಜ್ಯದ ಹೊಣೆಗಾರಿಕೆಯನ್ನು ಮಿತಿಗೊಳಿಸುವ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳ ಸಂಬಂಧದಲ್ಲಿ ನಿರ್ಧಾರವನ್ನು ಕೈಗೊಳ್ಳಲಾಯಿತು.

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು 1995ರ ಜೂನ್ 1ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,–

(ಎ) "ಸ್ವಯಂಚಾಲಿತ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ (Automatic or Time Bound Advancement Scheme)" ಎಂದರೆ, ಒಂದು ಹುದ್ದೆಯಲ್ಲಿ ನಿರ್ದಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸಿದ ತರುವಾಯ ಶೈಕ್ಷಣಿಕ ಸಂಸ್ಥೆಯೊಂದರ ಸಿಬ್ಬಂದಿಗೆ ಮಂಜೂರು ಮಾಡುವ ಉನ್ನತ ವೇತನ ಶ್ರೇಣಿಗಳು;

(ಬಿ) "ನೌಕರಿ ಮುಂಬಡ್ತಿ ಯೋಜನೆ (Career Advancement Scheme)" ಎಂದರೆ, ಕಾಲೇಜು ಅಥವಾ ಬಿ.ಎಡ್.(B.Ed) ಕಾಲೇಜು ಅಥವಾ ತಾಂತ್ರಿಕ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು, ಗ್ರಂಥಪಾಲರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಿಗೆ ಒಂದು ಹುದ್ದೆಯಲ್ಲಿ ನಿರ್ದಿಷ್ಟ ಸೇವಾವಧಿಯನ್ನು ಪೂರೈಸಿದ ತರುವಾಯ ಮಂಜೂರು ಮಾಡುವ ಉನ್ನತ ವೇತನ ಶ್ರೇಣಿಗಳು;

(ಸಿ) **"ಶೈಕ್ಷಣಿಕ ಸಂಸ್ಥೆ"** ಎಂದರೆ, ಯಾವುದೇ ವ್ಯಕ್ತಿಗಳ ನಿಕಾಯ ಸ್ಥಾಪಿಸಿ ನಿಯಂತ್ರಿಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಮತ್ತು ರಾಜ್ಯ ಸರ್ಕಾರವು ಮಾನ್ಯತೆ ನೀಡಿರುವ ಮತ್ತು ಎಲ್ಲೆಲ್ಲಿ ಅನ್ವಯವಾಗುವುದೋ ಅಲ್ಲಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಪದವಿ, ಡಿಪ್ಲೋಮೊ ಅಥವಾ ಸರ್ಟಿಫಿಕೇಟ್ ಕೋರ್ಸುಗಳ ಶಿಕ್ಷಣವನ್ನು ನೀಡುವ ಕಾಲೇಜುಗಳು ಅಥವಾ ತಾಂತ್ರಿಕ ಸಂಸ್ಥೆಗಳು ಅಥವಾ ಬಿ.ಎಡ್ ಕಾಲೇಜುಗಳು ಒಳಗೊಂಡಂತೆ ಪ್ರಾಥಮಿಕ, ಪ್ರೌಢ, ಪದವಿ-ಪೂರ್ವ ಕಾಲೇಜುಗಳು, ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣವನ್ನು ನೀಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು;

(ಡಿ) **"ಸಿಬ್ಬಂದಿ"** ಎಂದರೆ, ಶೈಕ್ಷಣಿಕ ಸಂಸ್ಥೆಯ ಒಬ್ಬ ಸಿಬ್ಬಂದಿ;

(ಇ) **"ಸರ್ಕಾರ"** ಎಂದರೆ, ಕರ್ನಾಟಕ ಸರ್ಕಾರ;

(ಎಫ್) **"ಸಹಾಯಾನುದಾನ"** ಎಂದರೆ, ಖಾಸಗಿ ಶೈಕ್ಷಣಿಕ ಸಂಸ್ಥೆಯಲ್ಲಿ ಯಾವುದೇ ಹುದ್ದೆಗಳಿಗೆ ರಾಜ್ಯ ನಿಧಿಯಿಂದ ವೇತನ ಅನುದಾನ ಎಂದು ಸಂದಾಯ ಮಾಡುವ ಹಣದ ಯಾವುದೇ ಮೊತ್ತ; ಮತ್ತು

(ಜಿ) **"ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆ"** ಎಂದರೆ, ರಾಜ್ಯ ಸರ್ಕಾರದಿಂದ ಸಹಾಯಾನುದಾನವನ್ನು ಸ್ವೀಕರಿಸುವ ಶೈಕ್ಷಣಿಕ ಸಂಸ್ಥೆ.

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರಲ್ಲಿ (1995ರ ಕರ್ನಾಟಕ ಅಧಿನಿಯಮ 1) ಇದರಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**3. ಕಾಲಿಕ ವೇತನ ಶ್ರೇಣಿಯಲ್ಲಿ ಕನಿಷ್ಠ ಸಹಾಯಾನುದಾನದ ಮಂಜೂರಾತಿ, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಳ್ಳದೇ ಕಾಲಬದ್ಧ ಮುಂಬಡ್ತಿಯ, ನೌಕರಿ ಮುಂಬಡ್ತಿಯ ಮತ್ತು ನಿವೃತ್ತಿ ಸೌಲಭ್ಯಗಳ ನಿರ್ಧಾರ ಹಾಗೂ ಕ್ಲೇಮುಗಳು, ಯಾವುವಾದರೂ ಇದ್ದಲ್ಲಿ, ಅವುಗಳನ್ನು ರದ್ದುಗೊಳಿಸುವುದು.–** (1) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರಲ್ಲಿ ಸರ್ಕಾರದ ಯಾವುದೇ ಆದೇಶ ಅಥವಾ ಯಾವುದೇ ಶೈಕ್ಷಣಿಕ ಸಂಸ್ಥೆಯ ಸಿಬ್ಬಂದಿಗಳಿಗೆ, ತ್ರಿವಿಧ ಸೌಲಭ್ಯ ಯೋಜನೆ (ಟಿಬಿಎಸ್) ನಿಯಂತ್ರಿಸುತ್ತಿರುವ ನಿಯಮಗಳು ಅಥವಾ ಮೇಲಿನ ನೌಕರ ವರ್ಗಕ್ಕೆ ಸಹಾಯಾನುದಾನವನ್ನು ನಿಯಂತ್ರಿಸುತ್ತಿರುವ ಯಾವುದೇ ಇತರ ಕಾನೂನು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ, ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಯ ಸಿಬ್ಬಂದಿಯು ಹೊಂದಿದ ಹುದ್ದೆಗೆ ಮಂಜೂರಾಗಬಹುದಾದ ಸಹಾಯಾನುದಾನವನ್ನು, ಸಹಾಯಾನುದಾನಕ್ಕೆ ಸೇರಿಸಲಾದ ದಿನಾಂಕದಿಂದ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ನಿಗದಿಮಾಡತಕ್ಕದ್ದು ಮತ್ತು ಲೆಕ್ಕಹಾಕತಕ್ಕದ್ದು ಹಾಗೂ ವೇತನ, ರಜೆ, ಜ್ಯೇಷ್ಠತೆ ಮತ್ತು ನಿವೃತ್ತಿ ವೇತನ ಉದ್ದೇಶಕ್ಕಾಗಿ, ಸಹಾಯಾನುದಾನಕ್ಕೆ ಸೇರುವುದಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ಲೆಕ್ಕಹಾಕತಕ್ಕದ್ದಲ್ಲ ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳನ್ನು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಳ್ಳದೆ ನಿರ್ಧರಿಸತಕ್ಕದ್ದು ಹಾಗೂ ಅಂಥ ಸಿಬ್ಬಂದಿಗೆ, ಸ್ವಯಂಚಾಲಿತ ಮುಂಬಡ್ತಿ ಯೋಜನೆ ಮತ್ತು ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಯು, ಯಾವುದಾದರೂ ಇದ್ದಲ್ಲಿ, ಅದರ ಸಂಬಂಧದಲ್ಲಿನ ಸರ್ಕಾರದ ಆರ್ಥಿಕ ಹೊಣೆಗಾರಿಕೆಯು, ಆ ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯ ಪರಿಮಾಣಕ್ಕೆ ಅನುಸಾರವಾಗಿ ಮಿತಿಗೊಳ್ಳತಕ್ಕದ್ದು.

(2) ಸರ್ಕಾರದ ಯಾವುದೇ ಆದೇಶ ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಯಾವುದೇ ತೀರ್ಪಿನಲ್ಲಿ ಏನೇ ಇದ್ದರೂ, ಸಹಾಯಾನುದಾನಕ್ಕೆ ಹುದ್ದೆಯು ಸೇರಿರುವ ದಿನಾಂಕಕ್ಕೆ ಮೊದಲು ಪಡೆದ ವೇತನ ಬಡ್ತಿಗಳನ್ನು ಲೆಕ್ಕ ಹಾಕುವುದರ ಮೂಲಕ ಸಹಾಯಾನುದಾನವನ್ನು ಬಿಡುಗಡೆಗೊಳಿಸುವುದಕ್ಕಾಗಿ ಮತ್ತು ಅನುದಾನರಹಿತ ಅವಧಿಗೆ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ ಕ್ಲೇಮುಗಳು ರದ್ದಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ,–

(i) ಸಹಾಯಾನುದಾನಕ್ಕೆ ಹುದ್ದೆಯು ಸೇರುವ ದಿನಾಂಕಕ್ಕೆ ಮೊದಲು ಸಿಬ್ಬಂದಿಯು ಗಳಿಸಿದ ವೇತನ ಬಡ್ತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ ಅಥವಾ ಸ್ವಯಂಚಾಲಿತ ಬಡ್ತಿ ಅಥವಾ ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಯ ಮೇಲೆ ಹೆಚ್ಚುವರಿ ಮೊತ್ತದ ಸಂದಾಯಕ್ಕಾಗಿ ಸಹಾಯಾನುದಾನವನ್ನು ಬಿಡುಗಡೆಗೊಳಿಸುವಾಗ ಮತ್ತು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ನಿರ್ದೇಶನ ನೀಡಿ ಸರ್ಕಾರವು ಹೊರಡಿಸಿದ ಆದೇಶಗಳು ರದ್ದುಗೊಳ್ಳತಕ್ಕದ್ದು:

ಪರಂತು, ಈಗ ರದ್ದಾಗಿರುವ ಆದೇಶದನ್ವಯ ಮತ್ತು ಕಾಲಬದ್ಧ ಮುಂಬಡ್ತಿ, ಅಥವಾ ಸ್ವಯಂಚಾಲಿತ ಮುಂಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ, ನೌಕರಿ ಮುಂಬಡ್ತಿ ಯೋಜನೆಗಳು ಮತ್ತು ನಿವೃತ್ತಿ ವೇತನಗಳ ಸೌಲಭ್ಯಗಳ ಸಂಬಂಧದಲ್ಲಿ ಪಾವತಿ ಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡತಕ್ಕದ್ದಲ್ಲ.

(ii) ಸಹಾಯಾನುದಾನಕ್ಕೆ ಸೇರುವ ದಿನಾಂಕಕ್ಕೆ ಮೊದಲು ಸದರಿ ಹುದ್ದೆಯಲ್ಲಿ ಗಳಿಸಲಾದ ವೇತನ ಬಡ್ತಿಗಳನ್ನು ಸಹಾಯಾನುದಾನದ ಬಿಡುಗಡೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಅಥವಾ ಕಾಲಬದ್ಧ ಮುಂಬಡ್ತಿ ಯೋಜನೆ ಅಥವಾ ಸ್ವಯಂಚಾಲಿತ ಬಡ್ತಿ (Promotion) ಯೋಜನೆ ಅಥವಾ ಸ್ವಯಂಚಾಲಿತ ಮುಂಬಡ್ತಿ ಯೋಜನೆ ಮತ್ತು ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಗಾಗಿನ ಹೆಚ್ಚುವರಿ ಮೊತ್ತವನ್ನು ಸಂದಾಯ ಮಾಡುವುದಕ್ಕಾಗಿ ಮತ್ತು ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯಪರಿಮಾಣವನ್ನು ಹೊರತುಪಡಿಸಿ, ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಅಂಥ ಸಿಬ್ಬಂದಿಗೆ ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನಗಳ ಪ್ರಯೋಜನಗಳನ್ನು ಅಂತಿಮಗೊಳಿಸಿವುದಕ್ಕಾಗಿ ಕ್ಲೇಮು ಮಾಡುವ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಯಾವೊಬ್ಬ ಸಿಬ್ಬಂದಿಯು ಸರ್ಕಾರದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ಮಾಡಲಾದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಿರ್ವಹಣೆ ಮಾಡತಕ್ಕದ್ದಲ್ಲ ಅಥವಾ ಮುಂದುವರೆಯತಕ್ಕದ್ದಲ್ಲ.

(iii) ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಯಾವೊಬ್ಬ ಸಿಬ್ಬಂದಿಯ ಪರವಾಗಿ, ಸಹಾಯಾನುದಾನಕ್ಕೆ ಸೇರುವ ದಿನಾಂಕಕ್ಕೆ ಮೊದಲು, ಹುದ್ದೆಯಲ್ಲಿ ಗಳಿಸಿದ ವೇತನ ಬಡ್ತಿಗಳನ್ನು ಸಹಾಯಾನುದಾನದ ಬಿಡುಗಡೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವಂತೆ ಮತ್ತು ಹುದ್ದೆಗೆ ಮಂಜೂರಾದ ಸಹಾಯಾನುದಾನದ ಅಗತ್ಯಪರಿಮಾಣವನ್ನು ಹೊರತುಪಡಿಸಿ, ಅಂಥ ಸಿಬ್ಬಂದಿಗೆ, ಕಾಲಬದ್ಧ ಮುಂಬಡ್ತಿ ಅಥವಾ ಸ್ವಯಂಚಾಲಿತ ಬಡ್ತಿ ಅಥವಾ ಸ್ವಯಂಚಾಲಿತ ಮುಂಬಡ್ತಿ ಯೋಜನೆ ಅಥವಾ ನೌಕರಿ ಮುಂಬಡ್ತಿ ಯೋಜನೆಯ ವಿಸ್ತರಣೆಯ ಹೆಚ್ಚುವರಿ ಮೊತ್ತದ ಸಂದಾಯಕ್ಕಾಗಿ ಮತ್ತು ಅನುದಾನರಹಿತ ಅವಧಿಗೆ ಸಲ್ಲಿಸಲಾದ ಸೇವೆಯನ್ನು ಅರ್ಹತಾದಾಯಕ ವರ್ಷಗಳೆಂದು ಲೆಕ್ಕಹಾಕುವ ಮೂಲಕ ನಿವೃತ್ತಿ ವೇತನಗಳ ಪ್ರಯೋಜನಗಳನ್ನು ಅಂತಿಮಗೊಳಿಸುವುದಕ್ಕಾಗಿ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಹಾಯಾನುದಾನಕ್ಕೆ ಒಳಪಡುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ ಮತ್ತು ಭತ್ಯೆ ಹಾಗೂ ಇತರ ಸೇವಾಷರತ್ತುಗಳನ್ನು ನಿಯಂತ್ರಿಸಲು ಹಾಗೂ ರಾಜ್ಯದ ಆರ್ಥಿಕ ಹೊಣೆಗಾರಿಕೆಯನ್ನು ಮಿತಿಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸಹಾಯಾನುದಾನಕ್ಕೆ ಒಳಪಡುವ ಉನ್ನತ ಶಿಕ್ಷಣದ ಪರಿಧಿಯೊಳಗೆ ಬರುವ ಬಿ.ಎಡ್. ಕಾಲೇಜುಗಳನ್ನು ಒಳಗೊಂಡಂತೆ ಇತರ ಕಾಲೇಜುಗಳು ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು, ಪದವಿಪೂರ್ವ ಕಾಲೇಜುಗಳ ಖಾಸಗಿ ಅನುದಾನ ರಹಿತ ಸಂಸ್ಥೆಗಳಲ್ಲಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಸಹಾಯಾನುದಾನಕ್ಕೆ ಒಳಪಡುವಾಗ ವೇತನ, ರಜೆ, ಜ್ಯೇಷ್ಠತೆ ಮತ್ತು ನಿವೃತ್ತಿ ವೇತನದ ಉದ್ದೇಶಕ್ಕಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕ ಹಾಕತಕ್ಕದ್ದಲ್ಲ ಎಂಬ ಸರ್ಕಾರದ ನಿಲುವನ್ನು ಸ್ಪಷ್ಟೀಕರಿಸುವ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಮೇರೆಗಿನ ಅನೇಕ ನಿಯಮಗಳನ್ನು ರಾಜ್ಯ ಸರ್ಕಾರವು ರಚಿಸಿದೆ.

ಮತ್ತು, ಶ್ರೀ ಎಚ್. ಪೀಟರ್ ರವರು ರಿಟ್ ಅರ್ಜಿ ಸಂಖ್ಯೆ: 10399/2004 ರಲ್ಲಿ ನಿವೃತ್ತಿ ವೇತನಗಳಿಗಾಗಿ ಅನುದಾನರಹಿತ ಸೇವಾವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದನ್ನು ಪ್ರಶ್ನಿಸಿದ್ದು, ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ನಿವೃತ್ತಿವೇತನ ಸೌಲಭ್ಯಗಳನ್ನು ಲೆಕ್ಕ ಮಾಡುವಾಗ ಅನುದಾನರಹಿತ ಅವಧಿಯನ್ನು ಪರಿಗಣಿಸತಕ್ಕದ್ದೆಂದು ನಿರ್ದೇಶಿಸಿ ಸದರಿ ರಿಟ್ ಅರ್ಜಿಯನ್ನು 01.09.2006ರಂದು ಪುರಸ್ಕರಿಸಿರುವುದರಿಂದ;

ಮತ್ತು, ರಿಟ್ ಅರ್ಜಿ ಸಂಖ್ಯೆ: 10399/2004ರಲ್ಲಿ ಮಾಡಲಾದ ದಿನಾಂಕ 01.09.2006ರ ಆದೇಶದ ವಿರುದ್ಧ ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದ ವಿಭಾಗ ಪೀಠದ ಮುಂದೆ ರಾಜ್ಯವು ಸಲ್ಲಿಸಿದ ರಿಟ್ ಅಪೀಲು: ಸಂಖ್ಯೆ 291/2007 ತಿರಸ್ಕೃತವಾಗಿದ್ದು, ಸರ್ವೋಚ್ಚ ನ್ಯಾಯಾಲಯದ ಮುಂದೆ ರಾಜ್ಯ ಸರ್ಕಾರವು ಸಲ್ಲಿಸಿದ ವಿಶೇಷ ಅನುಮತಿ ಅರ್ಜಿಯೂ 09.05.2011ರಂದು ವಜಾಗೊಂಡಿರುವುದರಿಂದ;

ಮತ್ತು, ನಿವೃತ್ತಿ ವೇತನ ಪ್ರಯೋಜನಗಳಿಗಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವುದನ್ನು ರಿಟ್ ಅರ್ಜಿ ಸಂಖ್ಯೆ: 126/2008 ಮತ್ತು ರಿಟ್ ಅರ್ಜಿ ಸಂಖ್ಯೆ: 15025/2006ರಲ್ಲಿ ಪ್ರಶ್ನಿಸಲಾಗಿದ್ದು ಸದರಿ ರಿಟ್ ಅರ್ಜಿಗಳು ರಾಜ್ಯವು ಸಲ್ಲಿಸಿದ ರಿಟ್ ಅಪೀಲುಗಳೊಂದಿಗೆ ಸಂಬಂಧಿಸಿದವುಗಳಾಗಿದ್ದು ಸದರಿ ರಿಟ್ ಅರ್ಜಿಗಳನ್ನು 03.11.2009ರಂದು ಪುರಸ್ಕರಿಸಿರುವುದರಿಂದ;

ಮತ್ತು, ವೇತನ ನಿಗದಿಗಾಗಿ ಅನುದಾನರಹಿತ ಅವಧಿಯು ಪರಿಗಣಿತವಲ್ಲವೆಂಬುದನ್ನು ರಿಟ್ ಅರ್ಜಿ ಸಂಖ್ಯೆ: 25447/2010ರಲ್ಲಿ ಪ್ರಶ್ನಿಸಲಾಗಿದ್ದು ದಿನಾಂಕ 16.08.2010ರಂದು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಯಿತು. ರಾಜ್ಯವು, ದಿನಾಂಕ 16.08.2010ರ ಆದೇಶದ ವಿರುದ್ಧವಾಗಿ ರಿಟ್ ಅಪೀಲು 4788/2010ನ್ನು ಸಲ್ಲಿಸಿದ್ದು ಸದರಿ ರಿಟ್ ಅಪೀಲನ್ನು ಮಾನ್ಯ ಉಚ್ಚನ್ಯಾಯಾಲಯದ ವಿಭಾಗ ಪೀಠವು ವಜಾಮಾಡಿತು ಮತ್ತು ವಿಶೇಷ ಅನುಮತಿ ಅರ್ಜಿ (ಎಸ್ಎಲ್‌ಪಿ) (ಸಿಸಿ) ಸಂಖ್ಯೆ 7365/2012ನ್ನೂ 02.07.2012ರಂದು ವಜಾಮಾಡಿತು. ವಿಶೇಷ ಅನುಮತಿ ಅರ್ಜಿ (ಸಿಸಿ) ಸಂಖ್ಯೆ: 7365/2012ರಲ್ಲಿ ಹೊರಡಿಸಿದ ಆದೇಶದ ವಿರುದ್ಧ ರಾಜ್ಯವು ಸಲ್ಲಿಸಿದ ಪುನರಾವಲೋಕನ ಅರ್ಜಿ ಸಂಖ್ಯೆ: 2364/2012 ಕೂಡಾ 06.12.2012ರಂದು ವಜಾಗೊಂಡಿದ್ದು, ತತ್ಪರಿಣಾಮವಾಗಿ, ಕರ್ನಾಟಕ ಪದವಿ–ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ

ನಿಯಮ 21(2) ಮತ್ತು (3) ರಲ್ಲಿ ನೀಡಲಾದ ನಿರ್ದೇಶನಗಳ ವಿರುದ್ಧವಾಗಿ ರಿಟ್ ಅರ್ಜಿ ಸಂಖ್ಯೆ: 25447/2010ರಲ್ಲಿ ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯದ ಆದೇಶಗಳನ್ನು ಪಾಲಿಸಬೇಕಾದ ಅನಿವಾರ್ಯ ಪರಿಸ್ಥಿತಿಯು ಬಂದೊದಗಿರುವುದರಿಂದ;

ಮತ್ತು, ದಿನಾಂಕ:03.11.2009ರ ಆದೇಶವನ್ನು ಪ್ರಶ್ನಿಸಿ ಭಾರತದ ಮಾನ್ಯ ಸರ್ವೋಚ್ಚನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿ(ಎಸ್‌ಎಲ್‌ಪಿ) ಸಂಖ್ಯೆ: 22176-22186/10 ಇದು ರಾಜ್ಯವು ಸಲ್ಲಿಸಿರುವ ಇತರ ಎಸ್‌ಎಲ್‌ಪಿಗಳೊಂದಿಗೆ ಸಂಬಂಧಿಸಿದವುಗಳಾಗಿದ್ದು ಸದರಿ ಎಸ್‌ಪಿಲ್‌ಪಿಗಳೂ ದಿನಾಂಕ 21.08.2013ರಂದು ವಜಾಗೊಂಡಿರುವುದರಿಂದ;

ಮತ್ತು ಸ್ವಯಂ ಚಾಲಿತ ಮುಂಬಡ್ತಿ ಯೋಜನೆ, ನೌಕರಿ ಮುಂಬಡ್ತಿ ಯೋಜನೆ ಮತ್ತು ನಿವೃತ್ತಿ ವೇತನಕ್ಕಾಗಿ ಅನುದಾನರಹಿತ ಅವಧಿಯ ಸೇವೆಯನ್ನು ಲೆಕ್ಕ ಹಾಕದಿರುವುದನ್ನು ರಿಟ್ ಅರ್ಜಿ ಸಂಖ್ಯೆಗಳು: 14676/2001, 871/2004, 19431/2005 ಮತ್ತು 5145/2007 ಇವುಗಳಲ್ಲಿ ಕೆಲವು ಅನುದಾನಿತ ಸಿಬ್ಬಂದಿಗಳು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ತ್ರಿವಿಧ ಸೌಲಭ್ಯ ಯೋಜನೆ (Triple Benefit Scheme) ನಿಯಮಗಳು ಮತ್ತು ಸರ್ಕಾರಿ ಆದೇಶಗಳು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 87ನೇ ಪ್ರಕರಣಕ್ಕೆ ಅನುಗುಣವಾಗಿಲ್ಲವೆಂದು, ಅದಕ್ಕಾಗಿ, ಟಿಬಿಎಸ್ ನಿಯಮಗಳ ಅನುಸಾರವಾಗಿ, ಅನುದಾನಿತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರವೇ ಅರ್ಹತಾ ಸೇವೆಗಾಗಿ ಪರಿಗಣಿಸುವ ಸರ್ಕಾರದ ವಾದವನ್ನು ತಿರಸ್ಕರಿಸುವ ಮೂಲಕ, ಮಾನ್ಯ ಉಚ್ಚ ನ್ಯಾಯಾಲಯವು ಅನುದಾನರಹಿತ ಅವಧಿಗಾಗಿ ವೇತನ ಬಡ್ತಿಗಳು ಮತ್ತು ಬಡ್ತಿಗಳನ್ನು ಒಳಗೊಂಡಂತೆ, ಪಡೆದ ವಾಸ್ತವಿಕ ಉಪಲಬ್ಧಿಗಳ ಆಧಾರದ ಮೇಲೆ ಪ್ರಾರಂಭದ ನೇಮಕಾತಿಯಿಂದ ಸೇವೆಯನ್ನು ಲೆಕ್ಕಹಾಕಬೇಕೆಂಬ ನಿರ್ದೇಶನವನ್ನು ನೀಡುವ ಮೂಲಕ 13.10.2006 ಮತ್ತು 12.12.2007ರಂದು ರಿಟ್ ಅರ್ಜಿಗಳನ್ನು ಪುರಸ್ಕರಿಸಿರುವುದರಿಂದ;

ಮತ್ತು, ರಿಟ್ ಅರ್ಜಿ ಸಂಖ್ಯೆಗಳು 14676/2001, 871/2004, 19431/2005 ಮತ್ತು 5145/2007ರಲ್ಲಿ ಮಾಡಲಾದ ದಿನಾಂಕ 13.10.2006 ಮತ್ತು 12.12.2007ರ ಆದೇಶಗಳಿಗೆ ವಿರುದ್ಧವಾಗಿ ಸರ್ಕಾರವು ಅಪೀಲುಗಳನ್ನು ಸಲ್ಲಿಸಿದ್ದು, ದಿನಾಂಕ 03.11.2009ರಂದು ಕರ್ನಾಟಕ ಮಾನ್ಯ ಉಚ್ಚ ನ್ಯಾಯಾಲಯವು, ರಾಜ್ಯ ಸರ್ಕಾರವು ಸಲ್ಲಿಸಿದ ರಿಟ್ ಅಪೀಲು ಸಂಖ್ಯೆ: 450/2007, 848/2008 ಇವುಗಳನ್ನು ಅಂತಹುದೇ ಇತರ ರಿಟ್ ಅರ್ಜಿಗಳೊಂದಿಗೆ ಜೋಡಿಸಿ ಈ ಮುಂದಿನ ಆದೇಶವನ್ನು ಹೊರಡಿಸಿರುವುದರಿಂದ, ಎಂದರೆ:-

"ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ, ರಾಜ್ಯವು ಸಲ್ಲಿಸಿದ ರಿಟ್ ಅಪೀಲುಗಳನ್ನು ವಜಾಮಾಡತಕ್ಕದ್ದು ಮತ್ತು ರಿಟ್ ಅರ್ಜಿಗಳನ್ನು ಪುರಸ್ಕರಿಸತಕ್ಕದ್ದು. ಸಮಗ್ರ (ಆಬ್ಸಲ್ಯೂಟ್) ನಿಯಮವನ್ನು ಮಾಡಲಾಗಿದೆ. ಈ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯೊಳಗೆ ಪ್ರತಿಯೊಬ್ಬ ಉಪನ್ಯಾಸಕರು/ಶಿಕ್ಷಕರು ರಿಟ್ ಅರ್ಜಿಗಳನ್ನು ಸಲ್ಲಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಪಾವತಿಸತಕ್ಕ ಪ್ರತಿವರ್ಷಕ್ಕೆ ಶೇಕಡಾ 6ರ ದರದಲ್ಲಿ ಬಡ್ಡಿಯೊಂದಿಗೆ ನಿವೃತ್ತಿವೇತನ ಮತ್ತು ಉಪದಾನವನ್ನೂ ಒಳಗೊಂಡಂತೆ ಅವರ ನಿವೃತ್ತಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅವರುಗಳಿಗೆ ಅನ್ವಯವಾಗುವ ಸಂಬಂಧಪಟ್ಟ ನಿಯಮಗಳಿಗೆ ಅನುಸಾರವಾಗಿ ಆದೇಶಗಳನ್ನು ಹೊರಡಿಸತಕ್ಕದ್ದು ಹಾಗೂ ಪ್ರತಿಯೊಬ್ಬ ಅರ್ಜಿದಾರನ ಪ್ರಕರಣವನ್ನು ಪರಿಶೀಲಿಸತಕ್ಕದ್ದು ಎಂದು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ."

ಮತ್ತು, ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) ಸಂಖ್ಯೆ: 22176-22186/2010ರಲ್ಲಿ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿದ ಅಪೀಲನ್ನು ಇತರ ಅಂತಹುದೇ ವಿಶೇಷ ಅನುಮತಿ ಅರ್ಜಿಗಳಿಗೆ (ಎಸ್‌ಎಲ್‌ಪಿ) ಜೋಡಣೆ ಮಾಡಿದ್ದು ಅವುಗಳನ್ನು 21.08.2013ರಂದು ವಜಾಮಾಡಲಾಗಿರುವುದರಿಂದ;

ಮತ್ತು, ತರುವಾಯದಲ್ಲಿ ಸಹಾಯಾನುದಾನದ ಅಡಿಯಲ್ಲಿ ತರಲಾದ ಅನುದಾನರಹಿತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ನಿವೃತ್ತಿ ಸೌಲಭ್ಯಗಳ ಉದ್ದೇಶಕ್ಕಾಗಿ ಸೇರಿಸಿಕೊಳ್ಳುವುದನ್ನು ಯಾವುದೇ ಸಮರ್ಥನೆಯಿರುವುದಿಲ್ಲ, ಹಾಗೆ ಸೇರಿಸಿಕೊಳ್ಳುವುದು, ನಿವೃತ್ತಿ ವೇತನ ನಿಯಮಗಳಲ್ಲಿ ಒಳಗೊಳ್ಳದ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ಆಗುತ್ತದೆ ಮತ್ತು ಅದು ಸರ್ಕಾರವು ಉದ್ದೇಶಿಸದೇ ಇದ್ದ ಸಹಾಯಾನುದಾನಕ್ಕೆ ಸೇರಿಸಿಕೊಳ್ಳುವುದು, ಪೂರ್ವಾನ್ವಯ ಪರಿಣಾಮವನ್ನು ನೀಡಿದಂತೆಯೂ ಆಗುವುದರಿಂದ;

ಮತ್ತು, ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯು ಅನುದಾನರಹಿತ ಅವಧಿಯಲ್ಲಿ ಗಳಿಸಿದ ವೇತನ ಬಡ್ತಿಗಳನ್ನು, ಸಹಾಯಾನುದಾನವನ್ನು ಬಿಡುಗಡೆಗೊಳಿಸುವುದಕ್ಕೆ ಹಾಗೂ ಸ್ವಯಂ ಚಾಲಿತ ಮುಂಬಡ್ತಿ ಯೋಜನೆಗಾಗಿ, ನೌಕರಿ ಮುಂಬಡ್ತಿ ಯೋಜನೆಗಾಗಿ ಮತ್ತು ನಿವೃತ್ತಿ ವೇತನದ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಂಡಲ್ಲಿ, ಅದು ರಾಜ್ಯದ ಬೊಕ್ಕಸಕ್ಕೆ ಬಹುದೊಡ್ಡ ಆರ್ಥಿಕ ಪರಿಣಾಮವನ್ನು ಒಳಗೊಂಡಿರುವುದರಿಂದ;

ಆದ್ದರಿಂದ, ಸರ್ಕಾರವು ವಿಷಯವನ್ನು ಪುನರವಲೋಕನ ಮಾಡಿ, ಸಹಾಯಾನುದಾನಕ್ಕೆ ಸೇರುವ ದಿನಾಂಕದಂದು ರಾಜ್ಯದಲ್ಲಿನ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದಲ್ಲಿ ಸಹಾಯಾನುದಾನವನ್ನು ವಿಸ್ತರಿಸುವ ಮತ್ತು ಹುದ್ದೆಗಳಿಗೆ ಮಂಜೂರಾದ ಸಹಾಯಾನುದಾನದಷ್ಟರಮಟ್ಟಿಗೆ ಮುಂಬಡ್ತಿ ಯೋಜನೆಗಳ ಮೇಲೆ ರಾಜ್ಯದ ಹೊಣೆಗಾರಿಕೆಯನ್ನು ಮಿತಿಗೊಳಿಸುವ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳ ಸಂಬಂಧದಲ್ಲಿ ನಿರ್ಧಾರವನ್ನು ಕೈಗೊಳ್ಳಲಾಯಿತು.

ಆದ್ದರಿಂದ, ಈ ಮುಂದಿನವುಗಳನ್ನು ವಿಧೇಯಕದಲ್ಲಿ ಉಪಬಂಧಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಸಿಬ್ಬಂದಿಯ ವೇತನ, ರಜೆ, ಜ್ಯೇಷ್ಠತೆ, ಸ್ವಯಂಚಾಲಿತ ಮುಂಬಡ್ತಿ ಯೋಜನೆ/ ನೌಕರಿ ಮುಂಬಡ್ತಿ ಯೋಜನೆಯ ಉದ್ದೇಶಕ್ಕಾಗಿ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು ಇತ್ಯರ್ಥಗೊಳಿಸುವಲ್ಲಿ ಅನುದಾನರಹಿತ ಅವಧಿಯಲ್ಲಿ ಸಲ್ಲಿಸಲಾದ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನ, ನಿವೃತ್ತಿ ವೇತನ ಮತ್ತು ಇತರ ಪ್ರಯೋಜನಗಳನ್ನು ನಿಯಂತ್ರಿಸಲು;

(ii) ಸಹಾಯಾನುದಾನ ಪಡೆಯುವುದಕ್ಕೆ ಮೊದಲು ಪಡೆದಿದ್ದ ವೇತನ ಬಡ್ತಿಗಳನ್ನು ಲೆಕ್ಕಹಾಕುವ ಮತ್ತು ನಿವೃತ್ತಿ ವೇತನ ಪ್ರಯೋಜನಗಳನ್ನು ಅಂತಿಮಗೊಳಿಸುವ ಸಂಬಂಧದಲ್ಲಿ ಅನುದಾನರಹಿತ ಸೇವೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಸರ್ಕಾರದ ಯಾವುದೇ ಆದೇಶ ಅಥವಾ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ನೀಡಿದ ಯಾವುದೇ ಆದೇಶದ ಮೂಲಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಯ ಕ್ಲೇಮುಗಳನ್ನು ಅಂತಿಮಗೊಳಿಸುವುದು;

(iii) ಕಾಲಬದ್ಧ ಮುಂಬಡ್ತಿ/ ಸ್ವಯಂಚಾಲಿತ ಮುಂಬಡ್ತಿ/ನೌಕರಿ ಮುಂಬಡ್ತಿ/ ನಿವೃತ್ತಿ ವೇತನ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಂದಾಯ ಮಾಡಲಾದ ಯಾವುದೇ ಮೊತ್ತವನ್ನು ವಸೂಲಿ ಮಾಡದಿರುವುದು;

(iv) ಸರ್ಕಾರದ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿನ ದಾವೆಯನ್ನು ಅಥವಾ ಇತರ ವ್ಯವಹರಣೆಗಳನ್ನು ನಿರ್ವಹಿಸದಿರುವಂತೆ ಅಥವಾ ಮುಂದುವರಿಸದಿರುವಂತೆ ಮತ್ತು ಅನುದಾನ ರಹಿತ ಅವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಆ ಅವಧಿಯಲ್ಲಿ ಗಳಿಸಿದ ವೇತನ ಬಡ್ತಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಸಹಾಯಾನುದಾನವನ್ನು ಬಿಡುಗಡೆಗೊಳಿಸುವಂತೆ ಮತ್ತು ನಿವೃತ್ತಿ ವೇತನವನ್ನು ಅಂತಿಮಗೊಳಿಸುವಂತೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸದಂತೆ ಯಾವುದೇ ನ್ಯಾಯಾಲಯವನ್ನು ನಿಯಂತ್ರಿಸುವುದು;

(v) ರಾಜ್ಯ ಬೊಕ್ಕಸಕ್ಕೆ ಆಗುವ ಹೆಚ್ಚಿನ ಆರ್ಥಿಕ ಪರಿಣಾಮವನ್ನು ಕಡಿಮೆಗೊಳಿಸುವುದು; ಹಾಗೂ

(vi) ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ಇತರ ವಿಷಯಗಳು.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರ್.ವಿ. ದೇಶಪಾಂಡೆ**
ಉನ್ನತ ಶಿಕ್ಷಣ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**THIRD SESSION**

## THE KARNATAKA PRIVATE AIDED EDUCATIONAL INSTITUTIONS EMPLOYEES (REGULATION OF PAY, PENSION AND OTHER BENEFITS) BILL, 2014

**(L.A. Bill No. 27 of 2014)**

A Bill to regulate salary and allowance and other conditions of service to teaching and non-teaching employees of private educational institutions on admission to grant-in-aid and limiting financial liability of the State and other matters connected therewith are incidental thereto;

Whereas, the State Government has admitted several private educational institutions for grant-in-aid to improve the standard of education and reduce the burden of the management by giving the salary grant to teaching and non-teaching staff.

And whereas, the Government in order No ED 65 SES 62 dated 24-08-1963 introduced the Karnataka State Aided Schools Employees Contributory Provident Fund-Insurance-Pension scheme (Triple Benefit Scheme) Rules to regulate pensionary benefits of aided institutions coming under the ambit of Primary and Secondary Education with effect from 01-04-1963 and directed to take in to account the length of qualifying service of all previous service whether temporary, officiating or permanent either in one or more than one State- aided Institution.

And whereas, the Government framed the Karnataka Education Act, 1983 to provide for the planned development of educational institutions, inculcations of healthy educational practice, maintenance and improvement in the standards of education and better organization discipline and control over Educational institutions in the state with a view to fostering the harmonious development of the mental and physical facilities of students and cultivating a scientific and secular outlook through education and the said Act came into force from 1-6-1995 as per Government notification No ED 2 MES 95 dated 30-05-1995 with a saving clause enshrined in Section 146 (3) by virtue of which the TBS Rules became part and parcel of the said Act.

And whereas, non-consideration of non-grant service for pay was questioned in W.P.Nos. 226-228/1998 and the said writ petitions were dismissed on 13-08-1998 by rejecting the reliefs sought by the writ petitioners.

And Whereas, the Government in letter No. ED 130 PMC 99 dated: 12-07-2001 has given direction not to reckon the unaided service for pensionary benefits.

And Whereas, the Government has issued a circular on 20-09-2003 bearing No. ED 90 PMC 99 clarifying that the non-grant service shall not be considered for the purpose of pension and leave.

And whereas the Government has issued order No. ED 674 SEW 2005 dated: 10-04-2006 reiterating the directions given in rule 3 (1) (b) and (c) of the Karnataka Educational Institutions (Recruitment and Terms and Conditions of Service of Employees in Private Aided and Primary and Secondary Educational Institutions) Rules, 1999, wherein the service rendered during non-grant period shall not be considered for pay, leave, pension and any other service benefits.

And whereas the non-reckoning of non-grant period of service for pensionary benefits was challenged by Sri H. Peter in W.P. No. 10399/2004 and the Hon'ble High Court of Karnataka allowed the said writ petition on 01-09-2006 with a direction to compute pensionary benefits by considering non-grant period.

And whereas, in exercise of powers conferred by Sub-Section (1) of Section 145 of the Karnataka Education Act, 1983 the Government framed the Karnataka Pre-University Education (Academic, Registration, Administration and Grant-in-aid etc.) Rules, 2006. The Sub-rule (2) and (3) of Rule 21 of the said Rules reads as below-

> "(2) The posts and the persons working in such posts in private aided Pre-University Colleges shall be eligible for grant-in-aid only from the date of sanction of the grant-in-aid by the Government and the earlier period of un-aided service shall not count for any pay fixation, increment, leave, seniority and other service benefits including pension.
>
> (3) Consequent to the sanction of salary grant-in-aid to an employee of aided Pre-University College, the initial pay of such an employee shall be fixed at the minimum of the pay scale applicable to the post and he will not be eligible for any monetary benefits either notionally or otherwise in respect of the earlier period of un-aided service."

And whereas, the Writ Appeal No.291/2007 filed by the State before the Division Bench of the Hon'ble High Court of Karnataka against the order dated: 01-09-2006 made in W.P. No.10399/2004 was rejected and the Special Leave Petition filed by the State before the Hon'ble Supreme Court was also dismissed on 09/05/2011

And whereas, non reckoning of non grant period of service for pensionary benefits was challenged in W.P. No.126/2008 and W.P. No.15025/2006 and the said writ petitions were connected with the writ appeals filed by the state and the said writ petitions were allowed on 03-11-2009.

And whereas, Government issued circular No. ED 156 PMC 2005 dated: 13-03-2009 once again reiterating the directions given in Rule 3 (1) (b) & (c) of the Karnataka Educational Institutions (Recruitment and Terms and Conditions of Service of Employees in private aided and primary and secondary educational institutions) Rules 1999, wherein the service rendered during unaided period shall not be considered for pay, leave, pension and any other service benefits.

And whereas, the non-consideration of non-grant period for fixation of pay was challenged in W.P.No. 25447/2010 and the said writ petition was allowed on 16-08-2010. The State filed Writ Appeal 4788/2010 against the order dated:16-08-2010 and the Division Bench of the Hon'ble High Court dismissed the said writ appeal and the Special Leave Petition (CC) No. 7365/2012 was dismissed on 02-07-2012. The review petition No. 2364/2012 filed by the State against the order passed in S.L.P. (CC) No. 7365/2012 was also dismissed on 06-12-2012, thereby creating inevitable situation of complying orders of the Hon'ble High Court of Karnataka in W.P. No. 25447/2010 against the directions given in rule 21(2) and (3) of the Karnataka Pre-University Education (Academic, Registration, Administration & Grant-in-aid etc.) Rules, 2006.

And whereas, the Special Leave Petition No. 22176-22186/10 filed by the State in the Hon'ble Supreme Court of India challenging order dated: 03/11/2009 was connected with other S.L.P's filed by the State and the said S.L.P's were dismissed on 21-08-2013.

And whereas, the Government in Order No. ED 176 UPC 75, dated: 18.08.1976, introduced the Karnataka State Aided College and Technical Institutions Employees Triple Benefit Scheme (Pension, Insurance and Management Contribution) Rules, 1976 (TBS Rules for short) to regulate pensionary benefits in aided institutions coming under the ambit of Higher Education with effect from 01.04.1970 and directed to take into account all the previous service rendered in regular and whole time posts in Grant-in-aid institutions governed by TBS Rules shall be taken into account for computing the length of qualifying service.

And whereas, Government in G.O.No. ED 15 UEC 89, dated: 05.04.1991 sanctioned the revised 1986 University Grants Commission pay scales to the Librarians and the Physical Education Personnel in the First Grade (Degree) i.e., Government Colleges and those aided by the Government as per the Grant-in-aid Code under the Department of Collegiate Education with effect from 01.01.1986 and extended the Career Advancement Scheme inter alia to the Librarian and Physical Education personnel in the aided colleges;

And whereas in exercise of the powers conferred by sub-section (1) of section 145 of the Karnataka Education Act, 1983, the Government has issued rules namely the Karnataka Educational Institutions (Recruitment and Terms and Conditions of Service of Employees in Aided Colleges of Education and Teachers' Training Institutes) Rules, 2001. In the

proviso to rule 3(1) (b) and 3 (1) (c) of the said rules, a direction is given that the service rendered during non-grant period shall not be considered for pay, leave, pension and any other service benefits.

And whereas, the service rendered by the employee of the private colleges and Technical Institutions prior to the date of admission into grant-in-aid was also taken into consideration for the purpose of Automatic Advancement Scheme and Career Advancement Scheme by an unintended interpretation of the directions given in Government Order NO. ED 25 UPC 2001, dated: 03.06.2003, which was issued with the intention of counting non-grant period service for Automatic Advancement Scheme and Career Advancement Scheme subject to fulfillment of conditions specified in the guidelines issued by the competent authorities/bodies;

And whereas, the non-reckoning of non-grant period of service for Automatic Advancement Scheme, Career Advancement Scheme and Pension was challenged by some Aided employees in Hon'ble High Court of Karnataka in Writ Petition Nos. 14676/2001, 871/2004, 19431/2005 and 5145/2007 and upholding the contention of the Petitioners that the Triple Benefit Scheme Rules and the Government Orders are not inconsonance with section 87 of the Karnataka Education Act, 1983 thereby rejecting the Government's contention that as per TBS Rules only the service rendered in aided institutions be considered for qualifying service, the Hon'ble High Court on 13.10.2006 and 12.12.2007 allowed the Writ Petitions by directing reckoning of the service from initial appointment on the basis of actual emoluments drawn, including increments and promotions for non-grant period;

And whereas, the State filed Appeals against the Orders dated: 13.10.2006 and 12.12.2007 made in Writ Petitions Nos. 14676/2001, 871/2004, 19431/2005 and 5145/2007 and on 03.11.2009, the Hon'ble High Court of Karnataka connected the Writ Appeals Nos. 450/2007 and 848/2008 filed by the State with other similar Writ Petitions delivering the following Order:

"Under the circumstances, Writ Appeals filed by the State have to be dismissed and the Writ Petitions have to be allowed. Rule is made absolute. The respective authorities are directed to consider the case of each of the Petitioner and pass orders accordingly in the context of relevant rules applicable to them with regard to their retirement benefits including pension and gratuity along with interest at the rate of 6% p.a. which shall be paid with effect from the date of filing of the Writ Petition by each of these lecturers/teachers within a period of two months from the date of receipt of the certified copy of this Order".

And whereas, the State of Karnataka preferred the Appeal in the Hon'ble Supreme Court in the Special Leave Petition No. 22176-22186/2010 was connected with other similar Special Leave Petitions were dismissed on 21.08.2013;

And whereas, there is no justification to include the service rendered in un-aided institutions which are subsequently brought under grant-in-aid, for the purpose of pensionary benefits as such inclusion would amount to taking into consideration the service not covered by the Pension Rules and it would also amount to giving retrospective effect to the admission to grant-in-aid which is never contemplated by the Government;

And whereas, if the increments earned by the teaching and non-teaching employees of the Private Aided Educational Institutions in non-grant period is taken into consideration for releasing the Grant-in-aid, and for the purposes of Automatic Advancement Scheme, Career Advancement Scheme and Pension it would involve very huge financial implication to the state exchequer;

And therefore, Government reviewed the matter and decided to extend Grant-in-aid computed at the minimum of pay in the time scale on the date of admission to grant in aid to the employees working in Private Educational institutions in the State and to limit the liability of the State on schemes of Advancement to the extent of Grant-in-aid sanctioned to the posts and for the matters connected therewith or incidental thereto for the purposes hereinafter appearing;

Be it enacted by the Karnataka State Legislature in the sixty fifth year of the Republic of India as follows:-

**1. Short title and commencement.-** (1) This Act may be called the Karnataka Private Aided Educational Institutions Employees (Regulation of Pay, Pension and other benefits) Act, 2014.

(2) It shall be deemed to have been come into force with effect from the 1st June, 1995.

**2. Definitions.-** (1) In this Act unless the context otherwise requires,-

(a) "Automatic or time bound Advancement Scheme" means Higher Scale of pay granted to an employee of an Educational Institutions after completion of specified period of service in a post;

(b) "Career Advancement Scheme" means Higher Scale of pay granted to a lecturer, librarian and physical education directors working in a college or B.Ed college or technical institution after completion of specified period of service in a post;

(c) "Educational Institution" means an Educational Institution imparting education at various levels of Primary, Secondary, Pre-University College, Teacher Training institutes, including colleges or Technical Institutions or B.Ed Colleges leading to degree, diploma or certificate courses established and administered or maintained by anybody of persons and recognized by the State Government and affiliated to any University, Wherever applicable;

(d) "Employee" means an employee of an Educational Institution;

(e) "Government" means Government of Karnataka;

(f) "Grant-in-Aid" means any sum of money paid as salary grant out of State funds to any posts in a Private Educational Institution; and

(g) "Private Aided Educational Institution" means an Educational Institution receiving Grant-in-aid by the State Government.

(2) Other words and expressions used in this Ordinance but not defined shall have the same meaning assigned to them in the Karnataka Education Act, 1983 (Karnataka Act 1 of 1995).

**3. Sanction of Grant-in-Aid at the minimum in the time scale, finalization of Time bond Advancement, career Advancement and the pensionary benefits by non-reckoning service rendered in non-grant period as qualifying years and extinguishment of claims if any,-**

(1) Notwithstanding anything contained in the Karnataka Education Act, 1983, any order of the Government or rules governing Triple Benefit Scheme to employees of any Educational Institution or any other Law Governing Grant in aid to the above employees or any judgment, decree or order of any Court or Tribunal or Authority, Grant-in-aid that may be sanctioned to a post held by an employee of a Private Aided Educational Institution shall be fixed and calculated at the minimum of pay in the time scale allowed to the post from the date of admission to grant-in-aid and the service rendered prior to admission for grant-in-aid shall not be reckoned for purpose of pay, leave, seniority and pension and finalization of the pensionary benefits shall be by non-reckoning service rendered in non-grant period as qualifying years and the financial liability of the Government in respect of Automatic Advancement Scheme and Career Advancement Scheme extended, if any, to such employee shall be limited to the quantum of Grant-in-aid sanctioned to the post.

(2) Notwithstanding anything contained in any order of the Government or any judgment of any Court or Tribunal, the claims of employees of Private Aided Educational Institution for release of Grant-in-Aid by counting the increments drawn prior to the date of admission of post to grant-in-aid and finalization of the pensionary benefits by reckoning service rendered in non-grant period as qualifying years shall stand extinguished and accordingly,-

(i) the orders issued by the Government directing to take into account the increments earned by an employee or for payment of additional amount on extension of Time bound Advancement Scheme or Automatic Promotion or Career Advancement Scheme of a Private aided Educational Institution, prior to the date of admission of post to Grant-in-aid, while releasing grant-in-aid and for finalization of the pensionary benefits by reckoning service rendered in non-grant period as qualifying years shall stand cancelled:

Provided that any amount paid as per the order now cancelled and towards Time Bound Advancement, or Automatic promotion or Automatic Advancement, Career Advancement Schemes and Pensionary benefits shall not be recovered.

(ii) No suit or other proceedings shall be maintained or continued in any court against the Government by any employee of Private Aided Educational Institutions claiming for release of Grant-in-aid taking into account the increments earned in the post prior to the date of admission of Grant-in-aid or for payment of additional amount on the extension of the Time bound Advancement Scheme or Automatic Promotion Scheme or the Automatic Advancement Scheme and Career Advancement Scheme and for finalization of the pensionary benefits by reckoning service rendered in non-grant period as qualifying years to such employee except the quantum of Grant-in-aid sanctioned to the post

(iii) No Court shall enforce any decree or order directing release of Grant-in-aid taking in to account the increments earned in the post, prior to the date of admission of grant-in-aid in favour of any employee of a Private Aided Educational Institutions and for payment of additional amount of the extension of the Time Bound Advancement or Automatic promotion or Automatic Advancement Scheme or Career Advancement Scheme to such employee and finalization of the pensionary benefits by reckoning service rendered in non-grant period as qualifying years except the quantum of grant-in-aid sanctioned to the post.

## STATEMENT OF OBJECTS AND REASONS

It is considered necessary to regulate salary and allowance and other conditions of service to teaching and non-teaching employees of private educational institutions on admission to grant-in-aid and limiting financial liability of the State.

The State Government framed several rules under the Karnataka Education Act, 1983 clarifying the stand of the Government that the non-grant period of service shall not be counted, on admission to Grant in aid, for the purpose of pay, leave, seniority and pension to teaching and non-teaching posts in Private Aided Education Institutions of Primary

Schools, Secondary schools, PU Colleges coming under the purview of the Primary and Secondary Education and Colleges including B.Ed. Colleges and Technical Institutions coming under the ambit of Higher Education into Grant-in-Aid.

And whereas the non-reckoning of non-grant period of service for pensionary benefits was challenged by Sri H. Peter in W.P. No. 10399/2004 and the Hon'ble High Court of Karnataka allowed the said writ petition on 01-09-2006 with a direction to compute pensionary benefits by considering non-grant period.

And whereas, the Writ Appeal No.291/2007 filed by the State before the Division Bench of the Hon'ble High Court of Karnataka against the order dated: 01-09-2006 made in W.P. No.10399/2004 was rejected and the Special Leave Petition filed by the State before the Hon'ble Supreme Court was also dismissed on 09/05/2011.

And whereas, non reckoning of non grant period of service for pensionary benefits was challenged in W.P. No.126/2008 and W.P. No.15025/2006 and the said writ petitions were connected with the writ appeals filed by the state and the said writ petitions were allowed on 03-11-2009.

And whereas, the non-consideration of non-grant period for fixation of pay was challenged in W.P.No. 25447/2010 and the said writ petition was allowed on 16-08-2010. The State filed Writ Appeal 4788/2010 against the order dated:16-08-2010 and the Division Bench of the Hon'ble High Court dismissed the said writ appeal and the Special Leave Petition (CC) No. 7365/2012 was dismissed on 02-07-2012. The review petition No. 2364/2012 filed by the State against the order passed in S.L.P. (CC) No. 7365/2012 was also dismissed on 06-12-2012, thereby creating inevitable situation of complying orders of the Hon'ble High Court of Karnataka in W.P. No. 25447/2010 against the directions given in rule 21(2) and (3) of the Karnataka Pre-University Education (Academic, Registration, Administration & Grant-in-aid etc.) Rules, 2006.

And whereas, the Special Leave Petition No. 22176-22186/10 filed by the State in the Hon'ble Supreme Court of India challenging order dated: 03/11/2009 was connected with other S.L.P's filed by the State and the said S.L.P's were dismissed on 21-08-2013.

And whereas, the non-reckoning of non-grant period of service for Automatic Advancement Scheme, Career Advancement Scheme and Pension was challenged by some Aided employees in Hon'ble High Court of Karnataka in Writ Petition Nos. 14676/2001, 871/2004, 19431/2005 and 5145/2007 and upholding the contention of the Petitioners that the Triple Benefit Scheme Rules and the Government Orders are not inconsonance with section 87 of the Karnataka Education Act, 1983 thereby rejecting the Government's contention that as per TBS Rules only the service rendered in aided institutions be considered for qualifying service, the Hon'ble High Court on 13.10.2006 and 12.12.2007 allowed the Writ Petitions by directing reckoning of the service from initial appointment on the basis of actual emoluments drawn, including increments and promotions for non-grant period;

And whereas, the State filed Appeals against the Orders dated: 13.10.2006 and 12.12.2007 made in Writ Petitions Nos. 14676/2001, 871/2004, 19431/2005 and 5145/2007 and on 03.11.2009, the Hon'ble High Court of Karnataka connected the Writ Appeals Nos. 450/2007 and 848/2008 filed by the State with other similar Writ Petitions delivering the following Order:

"Under the circumstances, Writ Appeals filed by the State have to be dismissed and the Writ Petitions have to be allowed. Rule is made absolute. The respective authorities are directed to consider the case of each of the Petitioner and pass orders accordingly in the context of relevant rules applicable to them with regard to their retirement benefits including pension and gratuity along with interest at the rate of 6% p.a. which shall be paid with effect from the date of filing of the Writ Petition by each of these lecturers/teachers within a period of two months from the date of receipt of the certified copy of this Order".

And whereas, the State of Karnataka preferred the Appeal in the Hon'ble Supreme Court in the Special Leave Petition No. 22176-22186/2010 was connected with other similar Special Leave Petitions were dismissed on 21.08.2013;

And whereas, there is no justification to include the service rendered in un-aided institutions which are subsequently brought under grant-in-aid, for the purpose of pensionary benefits as such inclusion would amount to taking into consideration the service not covered by the Pension Rules and it would also amount to giving retrospective effect to the admission to grant-in-aid which is never contemplated by the Government;

And whereas, if the increments earned by the teaching and non-teaching employees of the Private Aided Educational Institutions in non-grant period is taken into consideration for releasing the Grant-in-aid, and for the purposes of Automatic Advancement Scheme, Career Advancement Scheme and Pension it would involve very huge financial implication to the state exchequer;

And therefore, Government reviewed the matter and decided to extend Grant-in-aid computed at the minimum of pay in the time scale on the date of admission to grant in aid to the employees working in Private Educational institutions in the State and to limit the liability of the State on schemes of Advancement to the extent of Grant-in-aid sanctioned to the posts and for the matters connected therewith or incidental thereto.

Therefore, it is considered necessary provide for following in the Bill, namely:-

(i) to regulate pay, pension and other benefits of employees working in private aided educational institutions by non-reckoning of service rendered during the non-grant period for purpose of pay, leave, seniority automatic advancement scheme/career advance scheme and in settlement of pensionary benefits;

(ii) to extinguish the claims of employees of private aided educational institutions conferred by any order of the Government or by any judgment of the Court or Tribunal regarding counting the increments drawn prior to admission of grant-in-aid and finalization of pensionary benefits by non reckoning unaided services;

(iii) not to recover any amount paid already towards time-bound advancement/automatic advancement/career advancement / pensionary benefits;

(iv) not to maintain suit or other proceedings or to continue in any court against Government and to restrain any court to enforce any decree or order directing release of grant-in-aid taking into account the increments earned and finalization of pension by reckoning the service rendered during non-grant period; and

(v) to reduce the huge financial implication to the State exchequer;

(vi) other matters connected therewith or incidental thereto.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**R.V.DESHPANDE**
Minister for Higher Education

**P. OMPRAKASHA**
Secretary
Karnataka Legislative Assembly


# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – IV-A | ಬೆಂಗಳೂರು, ಸೋಮವಾರ, ಜನವರಿ ೨೭, ೨೦೧೪ (ಮಾಘ ೭, ಶಕ ವರ್ಷ ೧೯೩೫) | ನಂ. ೬೪ |
| **Part – IV-A** | **Bangalore, Monday, January 27, 2014 (Magha 7, Shaka Varsha 1935)** | **No. 64** |


**KARNATAKA LEGISLATIVE ASSEMBLY SECRETARIAT**

**NOTIFICATION**

**No. KLA/LGA/28/LA Bill/2014, Bangalore, Dated: 27-1-2014**

The following Bill was introduced in Legislative Assembly on 27-1-2014

**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಮೂರನೇ ಅಧಿವೇಶನ**

## ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2014

**(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 28)**

ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು (1966ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ಅಬ್ಕಾರಿ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 23ಎ ಪ್ರಕರಣದ ಸೇರ್ಪಡೆ.**–ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21) 23ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :–

**"23ಎ. ವಿದ್ಯುನ್ಮಾನ ಸಾಧನಗಳ ಮೂಲಕ ಅಬ್ಕಾರಿ ರಾಜಸ್ವದ ರವಾನೆ (ರೆಮಿಟೆನ್ಸ್).–** ಅಬ್ಕಾರಿ ರಾಜಸ್ವದ ಎಲ್ಲಾ ಸಂದಾಯಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ವಿದ್ಯುನ್ಮಾನ ಸಾಧನಗಳ (ಅಂತರ್ಜಾಲ) ಮೂಲಕ ರವಾನಿಸತಕ್ಕದ್ದು ಅಥವಾ ಮಾಡತಕ್ಕದ್ದು. ಅಬ್ಕಾರಿ ಕಮಿಷನರನು, ನಿಯಮಿಸಲಾದ ರೀತಿಯಲ್ಲಿ ಎಲ್ಲಾ ಅಬ್ಕಾರಿ ರಾಜಸ್ವವನ್ನು ಪರಿಣಾಮಕಾರಿಯಾಗಿ ರವಾನಿಸಲು ಯುಕ್ತ ವಿದ್ಯುನ್ಮಾನ ಸಾಧನಗಳನ್ನು ಅಭಿವೃದ್ಧಿಪಡಿಸುವಂತೆ ಮಾಡತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಲೈಸೆನ್ಸ್ ಫೀಜು, ಅಬ್ಕಾರಿ ಶುಲ್ಕ, ಹೆಚ್ಚುವರಿ ಅಬ್ಕಾರಿ ಶುಲ್ಕ ಅಥವಾ ಯಾವುದೇ ಇತರ ರೀತಿಯ ಫೀಜಿನಂಥ ಎಲ್ಲಾ ಅಬ್ಕಾರಿ ರಾಜಸ್ವವನ್ನು ವಿದ್ಯುನ್ಮಾನ ರವಾನೆಯ (ರೆಮಿಟೆನ್ಸ್) ಮೂಲಕ ಸಂದಾಯ ಮಾಡುವ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

**ಖಂಡ–2** ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 23ಎ ಪ್ರಕರಣವು ವಿದ್ಯುನ್ಮಾನ ಸಾಧನದ ಮೂಲಕ (ಅಂತರ್ಜಾಲ) ಕಂದಾಯ ರಾಜಸ್ವವನ್ನು ರವಾನಿಸುವ (ರೆಮಿಟೆನ್ಸ್) ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಸತೀಶ್ ಜಾರಕಿಹೊಳಿ**
ಅಬ್ಕಾರಿ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## KARNATAKA LEGISLATIVE ASSEMBLY
## FOURTEENTH LEGISLATIVE ASSEMBLY
## THIRD SESSION

## THE KARNATAKA EXCISE (AMENDMENT) BILL, 2014
**(L.A. Bill No. 28 of 2014)**

A Bill further to amend the Karnataka Excise Act, 1965.

Whereas it is expedient further to amend the Karnataka Excise Act, 1965 (Karnataka Act 21 of 1966) for the purposes hereinafter appearing;

Be it enacted by the Karnataka State Legislature in the Sixty Fourth year of the Republic of India, as follows.-

**1. Short title and commencement.-** (1) This Act may be called the Karnataka Excise (Amendment) Act, 2014.

(2) It shall come into force at once.

**2. Insertion of section 23A.-** In the Karnataka Excise Act, 1965 (Karnataka Act 21 of 1966), after section 23, the following shall be inserted, namely:-

"**23A. Remittance of Excise Revenue through electronic means.-** All payments of Excise revenue shall be remitted or done through electronic means (Internet), in such manner as may be prescribed. The excise commissioner shall cause to develop appropriate electronic means for remittance of all excise revenue in the manner prescribed effectively."

## STATEMENT OF OBJECTS AND REASONS

It is considered necessary to amend the Karnataka Excise Act, 1965 to facilitate payment of all Exicse Revenue like License Fee, Excise Duty, Additional Excise Duty or any other form of fee by way of electronic remittance.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| **Clause 2 :** | Section 23A proposed to be inserted by this clause empowers the State Government to make rules the manner of remittance of excise revenue through electronic means (Internet). |

The proposed delegation of legislative power is normal in character.

**SATISH JARKIHOLI**
Minister for Excise

**P. OMPRAKASHA**
Secretary
Karnataka Legislative Assembly

# ವಿಶೇಷ ರಾಜ್ಯ ಪತ್ರಿಕೆ



| | | |
|---|---|---|
| ಭಾಗ – IV-A | ಬೆಂಗಳೂರು, ಸೋಮವಾರ, ಜನವರಿ ೨೭, ೨೦೧೪ (ಮಾಘ ೭, ಶಕ ವರ್ಷ ೧೯೩೫) | ನಂ. ೬೫ |
| **Part – IV-A** | **Bangalore, Monday, January 27, 2014 (Magha 7, Shaka Varsha 1935)** | **No. 65** |



## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

### ಅಧಿಸೂಚನೆ

**ಸಂ: ಡಿಸಿಎ 16 ಎಆರ್‌ಬಿ 2013, ಬೆಂಗಳೂರು, ದಿನಾಂಕ: 27–01–2014**

ಭಾರತ ಸಂವಿಧಾನದ 166 ನೇ ಅನುಚ್ಛೇದದ (2) ಮತ್ತು (3)ನೇ ಖಂಡಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು ಈ ಮೂಲಕ ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ರಚಿಸಿದ್ದಾರೆ, ಎಂದರೆ :–

**1. ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳ ನಿರ್ವಹಣೆ) (ತಿದ್ದುಪಡಿ) ನಿಯಮಗಳು, 2013 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. 17ನೇ ನಿಯಮದ ತಿದ್ದುಪಡಿ :–** ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ 17ನೇ ನಿಯಮದ, (2) ನೇ ಉಪ ನಿಯಮದ ಮೊದಲ ಪರಂತುಕದ ತರುವಾಯ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

**"ಮತ್ತೂ ಪರಂತು, ಕರ್ನಾಟಕ ವಿತ್ತೀಯ ಜವಾಬ್ದಾರಿ ಕಾಯಿದೆ, 2002 ರ ಭಾಗ 6 ರ ಉಪವಿಭಾಗ (4) ರಲ್ಲಿರುವ ಅಗತ್ಯತೆಗೆ ತಕ್ಕಂತೆ ಇಲ್ಲದಿದ್ದಲ್ಲಿ ಇಂತಹ ಯಾವುದೇ ನಿರ್ಣಯ ತೆಗೆದುಕೊಳ್ಳತಕ್ಕದ್ದಲ್ಲ".**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಡಾ. ಮಂಗಳ ಜಿ.ಎಸ್**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

## PERSONNEL AND ADMINISTRATIVE REFORMS SECRETARIAT

### NOTIFICATION

**No. DCA 16 ARB 2013, Bangalore, Dated: 27.01.2014**

In exercise of the powers conferred by clauses (2) and (3) of Article 166 of the Constitution of India, the Governor of Karnataka hereby makes the following rules further to amend the Karnataka Government (Transaction of Business) Rules, 1977, namely :-

**1. Title and commencement:-** (1) These Rules may be called the Karnataka Government (Transaction of Business ) (Amendment) Rules, 2013.

(2) They shall come into force on the date of their publication in the official Gazette.

**2. Amendment of rule 17:-** In the Karnataka Government (Transaction of Business) Rules, 1977, in rule 17, in sub-rule (2), after first proviso the following proviso shall be inserted, namely:-

**"Provided further that no such decision would be taken if it does not satisfy the requirement of sub-section (4) of section 6 of the Karnataka Fiscal Responsibility Act, 2002".**

By Order and in the name of the Governor of Karnataka

**Dr. Mangala G.S.**

Under Secretary to Government
Department of Personnel and Administrative Reforms
(Service Rules)

# ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – IV-A | ಬೆಂಗಳೂರು, ಮಂಗಳವಾರ, ಜನವರಿ ೨೮, ೨೦೧೪ (ಮಾಘ ೮, ಶಕ ವರ್ಷ ೧೯೩೫) | ನಂ. ೬೬ |
| **Part – IV-A** | **Bangalore, Tuesday, January 28, 2014 (Magha 8, Shaka Varsha 1935)** | **No. 66** |

**KARNATAKA LEGISLATIVE ASSEMBLY SECRETARIAT**

**NOTIFICATION**

**No. KLA/LGA/29/LA Bill/2014, Bangalore, Dated: 28-1-2014**

The following Bill was introduced in Legislative Assembly on 28-1-2014

**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಮೂರನೇ ಅಧಿವೇಶನ**

## ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2014

**(2014ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 29)**

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956 ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 11ಎ ಪ್ರಕರಣದ ತಿದ್ದುಪಡಿ.–** ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 11ಎ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದ ಐದನೇ ಪರಂತುಕಕ್ಕೆ 1990ರ ಆಗಸ್ಟ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಈ ಮುಂದಿನದನ್ನು ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"ಅಲ್ಲದೆ ಪರಂತು, ಒಬ್ಬ ವ್ಯಕ್ತಿಗೆ ಆರೋಪಿಸಲಾಗದ ತಾಂತ್ರಿಕ ಕಾರಣಗಳಿಗಾಗಿ ಚುನಾವಣಾ ಅರ್ಜಿಯೊಂದರಲ್ಲಿ ಆ ಚುನಾವಣೆಯನ್ನು ನ್ಯಾಯಾಲಯವು ರದ್ದುಗೊಳಿಸಲಾಗಿದ್ದಲ್ಲಿ ಮತ್ತು ಈ ಕಾರಣಕ್ಕಾಗಿ ಆ ವ್ಯಕ್ತಿಯು ಐದು ವರ್ಷಗಳ ಅವಧಿಯನ್ನು ಸದಸ್ಯನಾಗಿ ಸೇವೆ ಸಲ್ಲಿಸಲು ಅಸಮರ್ಥನಾದಲ್ಲಿ, ಆತನು ಸಲ್ಲಿಸಿದ ವಾಸ್ತವವಾದ ಸೇವೆಯ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ, ಆತನು ಐದು ವರ್ಷಗಳ ಅವಧಿಗೆ ಸದಸ್ಯನಾಗಿ ಸೇವೆ ಸಲ್ಲಿಸಿದ್ದಾನೆಂದು ಭಾವಿಸತಕ್ಕದ್ದು.

**ವಿವರಣೆ:** ಈ ಪರಂತುಕದ ಉದ್ದೇಶಕ್ಕಾಗಿ ತಾಂತ್ರಿಕ ಕಾರಣ ಎಂದರೆ ಭಾರತದ ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮತದಾರರ ಪಟ್ಟಿಯಲ್ಲಿ ಕೆಲವು ಮತದಾರರನ್ನು ಸೇರಿಸುವುದು."

(ii) ವಿವರಣೆಗೆ, 2005ರ ಆಗಸ್ಟ್ 24ನೇ ದಿನಾಂಕದಿಂದ ಜಾರಿಗೆ ಬರುವಂತೆ ಈ ಮುಂದಿನದನ್ನು ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"**ವಿವರಣೆ:**– ಈ ಉಪಪ್ರಕರಣದ ಉದ್ದೇಶಕ್ಕಾಗಿ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ ಎನ್ನುವುದು,–

(1) 1956ರ ನವೆಂಬರ್ ಒಂದನೇ ದಿನಾಂಕಕ್ಕೆ ಮೊದಲು ಒಬ್ಬ ವ್ಯಕ್ತಿಯು, ಸದರಿ ದಿನಾಂಕದಂದು ಮತ್ತು ಆ ತರುವಾಯ ನವ ಕರ್ನಾಟಕ ರಾಜ್ಯದ ಒಂದು ಭಾಗವಾಗಿ ಸೇರಿದ ಯಾವುದೇ ಪ್ರದೇಶವನ್ನು, ಸದರಿ ಪ್ರದೇಶವು ಆ ಹಿಂದೆ ತನ್ನ ಒಂದು ಭಾಗವಾಗಿದ್ದ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ, ಪ್ರತಿನಿಧಿಸಿದ್ದರೆ ಆತನನ್ನೂ ಒಳಗೊಳ್ಳುತ್ತದೆ:

ಪರಂತು, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಆತನ ಸದಸ್ಯತ್ವದ ಅವಧಿಯಲ್ಲಿ, ಕರ್ನಾಟಕ ರಾಜ್ಯದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ ಆತನು ಖಾಯಂ ಆಗಿ ವಾಸ ಮಾಡುತ್ತಿದ್ದರೆ, ಆತನು ನಿವೃತ್ತಿವೇತನಕ್ಕೆ ಅರ್ಹನಾಗಿರತಕ್ಕದ್ದು.

(2) 1952ರ ಜನವರಿ ಮೊದಲನೇ ದಿನಾಂಕಕ್ಕೆ ಮೊದಲು,–

(ಎ) ಸಂವಿಧಾನ ಸಭೆಯ;

(ಬಿ) ಮೈಸೂರು ಪ್ರತಿನಿಧಿ ಸಭೆಯ;

(ಸಿ) ಮೈಸೂರು ವಿಧಾನ ಸಭೆಯ;

(ಡಿ) ಈಗ ಕರ್ನಾಟಕ ರಾಜ್ಯದ ಭಾಗವಾಗಿವಾಗಿರುವ ಯಾವುದೇ ರಾಜ್ಯದ (ಒಂದು ಭಾರತೀಯ ರಾಜ್ಯವೂ ಒಳಗೊಂಡಂತೆ) ಅಥವಾ ಪ್ರಾಂತ್ಯದ ಅಥವಾ ಯಾವುದೇ ಪ್ರದೇಶದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ,

– ಸದಸ್ಯನಾಗಿದ್ದ ವ್ಯಕ್ತಿಯನ್ನು ಒಳಗೊಳ್ಳುತ್ತದೆ:

ಪರಂತು, ಅಂಥ ನಿವೃತ್ತಿ ವೇತನವನ್ನು, ಒಬ್ಬ ವ್ಯಕ್ತಿಗೆ, ಆತನು,–

(i) ತಾನು ಪ್ರತಿನಿಧಿಸಿದ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು, ಸದಸ್ಯನಾಗಿ ಸೇವೆ ಸಲ್ಲಿಸಿದ ವ್ಯಕ್ತಿಯ ಸಂದರ್ಭದಲ್ಲಿ ಹೊರತು; ಮತ್ತು

(ii) ಯಾವೊಬ್ಬ ಇತರ ಸದಸ್ಯನ ಸಂದರ್ಭದಲ್ಲಿ, ಈಗ ಕರ್ನಾಟಕ ರಾಜ್ಯದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ, ಅಂಥ ಸದಸ್ಯತ್ವದ ಅವಧಿಯಲ್ಲಿ ಆತನು ಶಾಶ್ವತವಾಗಿ ವಾಸವಾಗಿದ್ದ ಹೊರತು,

– ಪಾವತಿಸತಕ್ಕದ್ದಲ್ಲ."

**3. 11ಬಿ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 11ಬಿ ಪ್ರಕರಣದ (1ಎ) ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ವಿಧಾನ ಪರಿಷತ್ತಿನ ಅಥವಾ ವಿಧಾನ ಸಭೆಯ ಸದಸ್ಯನಾಗಿದ್ದು, ಮೃತನಾದ ವ್ಯಕ್ತಿಯ ಕುಟುಂಬವು, ಆತನು ನಿವೃತ್ತಿ ವೇತನವನ್ನು ಸ್ವೀಕರಿಸುತ್ತಿದ್ದಿರಲಿ ಅಥವಾ ಇಲ್ಲದಿದ್ದಿರಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಕುಟುಂಬ ನಿವೃತ್ತಿ ವೇತನಕ್ಕೆ ಅರ್ಹನಾಗಿರತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗೆ, ಎಂದರೆ:–

(i) 1952ರ ಜನವರಿಗೆ ಮೊದಲು, ಮೈಸೂರು ಪ್ರಾತಿನಿಧಿಕ ಸಭೆಯ (ಎಂಆರ್‌ಎ) ಸದಸ್ಯ ಅಥವಾ ಕೊಡಗು ಪ್ರಾತಿನಿಧಿಕ ಸಭೆಯ, ಸಂವಿಧಾನ ಸಭೆಯ ಅಥವಾ ಈಗ ರಾಜ್ಯದ ಭಾಗವಾಗಿರುವ ಭಾರತದ ರಾಜ್ಯ ಅಥವಾ ಪ್ರಾಂತ್ಯದ ಅಥವಾ ಯಾವುದೇ ಪ್ರದೇಶವನ್ನೊಳಗೊಂಡಂತೆ ಯಾವುದೇ ರಾಜ್ಯದ ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿದ್ದು ಮೃತನಾದ ವ್ಯಕ್ತಿಯ ಕುಟುಂಬಕ್ಕೆ ನಿವೃತ್ತಿ ವೇತನವನ್ನು ನೀಡುವುದಕ್ಕಾಗಿ; ಮತ್ತು

(ii) ಒಬ್ಬ ಶಾಸಕನಿಗೆ ಆರೋಪಿಸಲಾಗದ ಕಾರಣಗಳಿಗಾಗಿ, ಎಂದರೆ, ಭಾರತದ ಚುನಾವಣಾ ಆಯೋಗವು ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮತದಾರರ ಪಟ್ಟಿಯಲ್ಲಿ ಕೆಲವು ಮತದಾರರನ್ನು ಸೇರಿಸುವಂಥ ತಾಂತ್ರಿಕ ಕಾರಣಗಳಿಗಾಗಿ, ಚುನಾವಣಾ ಅರ್ಜಿಯಲ್ಲಿ ನ್ಯಾಯಾಲಯವು ಆ ಶಾಸಕನ ಚುನಾವಣೆಯನ್ನು ರದ್ದುಗೊಳಿಸಿದ್ದಲ್ಲಿ, ಅಂತಹ ಶಾಸಕನಿಗೆ 1990ರ ಆಗಸ್ಟ್ 1ನೇ ದಿನಾಂಕದಿಂದ ನಿವೃತ್ತಿ ವೇತನವನ್ನು ನೀಡುವುದಕ್ಕಾಗಿ,

– ಉಪಬಂಧ ಕಲ್ಪಿಸಲು ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ವರ್ಷವೊಂದಕ್ಕೆ ಅಂದಾಜು 4.80 ಲಕ್ಷ ರೂಪಾಯಿಗಳ ಹೆಚ್ಚುವರಿ ಆವರ್ತಕ ವೆಚ್ಚವುಂಟಾಗುತ್ತದೆ.

**ಟಿ.ಬಿ.ಜಯಚಂದ್ರ**

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು
ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು

**ಪಿ. ಓಂಪ್ರಕಾಶ**

ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) ಉದ್ಧೃತ ಭಾಗ**

xx xx xx

**11ಎ. ಸದಸ್ಯರಿಗೆ ನಿವೃತ್ತಿ ವೇತನ ಇತ್ಯಾದಿ.–** (1) ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 2009 ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ ಐದು ವರ್ಷಗಳ ಅವಧಿಗಾಗಿ ಸೇವೆ ಸಲ್ಲಿಸಿದ ಪ್ರತಿಯೊಬ್ಬ ವ್ಯಕ್ತಿಗೆ, ಎಂದರೆ,–

(i) ವಿಧಾನ ಪರಿಷತ್‌ನ ಸದಸ್ಯನಾಗಿ; ಅಥವಾ

(ii) ವಿಧಾನಸಭಾ ಸದಸ್ಯನಾಗಿ; ಅಥವಾ

(iii) ವಿಧಾನಸಭಾ ಸದಸ್ಯನಾಗಿ ಭಾಗಶಃ ಮತ್ತು ವಿಧಾನ ಪರಿಷತ್‌ನ ಸದಸ್ಯನಾಗಿ ಭಾಗಶಃ ಸೇವೆ ಸಲ್ಲಿಸಿರುವವನಿಗೆ ಅವನ ಜೀವಿತದ ಉಳಿದ ಅವಧಿಗೆ ಪ್ರತಿ ತಿಂಗಳು ಇಪ್ಪತ್ತೈದು ಸಾವಿರ ರೂಪಾಯಿಗಳ ನಿವೃತ್ತಿ ವೇತನ ಸಂದಾಯವಾಗತಕ್ಕದ್ದು:

ಪರಂತು, ಯಾರೇ ವ್ಯಕ್ತಿ ಮೇಲೆ ಹೇಳಲಾದ ರೀತಿಯಲ್ಲಿ ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಗಾಗಿ ಸೇವೆ ಸಲ್ಲಿಸಿದ್ದರೆ ಅವನಿಗೆ ಆ ತರುವಾಯದ ಪೂರ್ಣಗೊಂಡ ಪ್ರತಿ ವರ್ಷಕ್ಕೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳ ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು ಹಾಗೆ ಆದಾಗ್ಯೂ ಈ ಪ್ರಕರಣದ ಅಡಿಯಲ್ಲಿ ಸಂದಾಯವಾಗಬೇಕಾದ ಒಟ್ಟು ಮೊತ್ತದ ನಿವೃತ್ತಿ ವೇತನವು ಪ್ರತಿ ತಿಂಗಳಿಗೆ ಮೂವತ್ತೈದು ಸಾವಿರ ರೂಪಾಯಿಗಳನ್ನು ಮಿರತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಸದಸ್ಯನ ಸೇವೆಯ ಹೆಚ್ಚುವರಿ ನಿವೃತ್ತಿ ವೇತನವನ್ನು ಲೆಕ್ಕಮಾಡುವ ಉದ್ದೇಶಕ್ಕಾಗಿ ಆರು ತಿಂಗಳಿಗೆ ಮೀರಿದ ಭಾಗವನ್ನು ಒಂದು ಸಂಪೂರ್ಣ ವರ್ಷವೆಂದು ಪರಿಗಣಿಸತಕ್ಕದ್ದು:

ಅಲ್ಲದೆ ಪರಂತು, ವಿಧಾನ ಸಭೆಯ ವಿಸರ್ಜನೆಯ ಕಾರಣದಿಂದಾಗಿ ಐದು ವರ್ಷಗಳು ಸೇವೆ ಸಲ್ಲಿಸದಂತೆ ಒಬ್ಬ ಸದಸ್ಯನು ಪ್ರತಿಬಂಧಿತನಾಗಿದ್ದರೆ, ಅವನು ಸದಸ್ಯನಾಗಿ ಐದು ವರ್ಷ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೆ ಪರಂತು, ಒಬ್ಬ ವ್ಯಕ್ತಿಯು ಮೊದಲು ವಿಧಾನ ಪರಿಷತ್ತಿನ ಸದಸ್ಯನಾಗಿದ್ದು ಅವನು ತನ್ನ ಆರು ವರ್ಷಗಳ ಪೂರ್ಣ ಅಧಿಕಾರಾವಧಿಯ ಸೇವೆ ಸಲ್ಲಿಸುವ ಮೊದಲೇ ಚೀಟಿ ಮೂಲಕ ಅವನ ಅಧಿಕಾರಾವಧಿ ಮುಕ್ತಾಯವಾಗಿದ್ದರೆ, ಅವನು ಧಾರಣ ಮಾಡಿದ್ದ ಅಧಿಕಾರದ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಅವನು ಐದು ವರ್ಷಗಳ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೆ ಪರಂತು, ಚುನಾವಣಾ ಪಿಟಿಷನ್‌ವೊಂದರಲ್ಲಿ ನ್ಯಾಯಾಲಯದ ಮೂಲಕ ಚುನಾಯಿತನಾಗಿರುವನೆಂದು ಘೋಷಿತನಾಗಿದ್ದರೆ ಮತ್ತು ಚುನಾವಣೆ ಪಿಟಿಷನ್ ಇತ್ಯರ್ಥಕ್ಕೆ ಬಾಕಿ ಇದ್ದ ಅವಧಿಯಲ್ಲಿ ಸದಸ್ಯನಾಗಿ ಸೇವೆ ಸಲ್ಲಿಸಲು ಸಾಧ್ಯವಾಗದಿದ್ದ ವ್ಯಕ್ತಿಯ ಸಂಬಂಧದಲ್ಲಿ, ವಾಸ್ತವಿಕ ಸೇವೆಯ ಅವಧಿಯು ಏನೇ ಇದ್ದರೂ ಆತನು ಐದು ವರ್ಷಗಳ ಅವಧಿಗಾಗಿ ಸದಸ್ಯನಾಗಿ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೆ ಪರಂತು, ಒಬ್ಬ ವ್ಯಕ್ತಿಯು, ಉಪ–ಚುನಾವಣೆಯಲ್ಲಿ ಚುನಾಯಿತನಾಗಿರುವನೆಂದು ಘೋಷಿತನಾಗಿದ್ದರೆ ಅಥವಾ ಅಧಿಕಾರಾವಧಿಯ ಮಧ್ಯದಲ್ಲಿ ಸದಸ್ಯನೆಂದು ನಾಮನಿರ್ದೇಶನಗೊಂಡಿದ್ದರೆ ಮತ್ತು ಅವನಿಗೆ ಪೂರ್ಣಾವಧಿ ಸೇವೆ ಸಲ್ಲಿಸಲು ಸಾಧ್ಯವಾಗದಿದ್ದರೆ ಅವನು ವಾಸ್ತವವಾಗಿ ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಳ್ಳದೆ ಐದು ವರ್ಷಗಳ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಪರಂತು, ಒಬ್ಬ ಸದಸ್ಯನು ರಾಜೀನಾಮೆ ಸಲ್ಲಿಸಿದರೆ, ಅವನು ಸದಸ್ಯನಾಗಿ ಐದು ವರ್ಷಗಳವರೆಗೆ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಕ್ಕಾಗಿ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ ಎಂದರೆ, 1956ರ ನವೆಂಬರ್ ಒಂದನೇ ದಿನಾಂಕಕ್ಕೆ ಮೊದಲು ಒಬ್ಬ ವ್ಯಕ್ತಿಯು, ಸದರಿ ದಿನಾಂಕದಂದು ಮತ್ತು ಆ ತರುವಾಯ ನವ ಕರ್ನಾಟಕ ರಾಜ್ಯದ ಒಂದು ಭಾಗವಾಗಿ ಸೇರಿದ ಯಾವುದೇ ಪ್ರದೇಶವನ್ನು, ಸದರಿ ಪ್ರದೇಶವು ಆ ಹಿಂದೆ ತನ್ನ ಒಂದು ಭಾಗವಾಗಿದ್ದ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ, ಪ್ರತಿನಿಧಿಸಿದ್ದರೆ ಆತನನ್ನೂ ಒಳಗೊಳ್ಳುತ್ತದೆ:

ಪರಂತು, ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಅವನ ಸದಸ್ಯತ್ವದ ಅವಧಿಯಲ್ಲಿ ಅವನು ಖಾಯಂ ಆಗಿ ಕರ್ನಾಟಕ ರಾಜ್ಯದ ಭಾಗವಾಗುವ ಯಾವುದೇ ಪ್ರದೇಶದಲ್ಲಿ ವಾಸವಾಗಿದ್ದರೆ ನಿವೃತ್ತಿ ವೇತನಕ್ಕೆ ಅರ್ಹನಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿವೃತ್ತಿ ವೇತನಕ್ಕೆ ಹಕ್ಕುದಾರನಾಗಿರುವ ಯಾರೇ ವ್ಯಕ್ತಿಯು,–

(i) ಭಾರತದ ರಾಷ್ಟ್ರಪತಿ ಅಥವಾ ಉಪ–ರಾಷ್ಟ್ರಪತಿಯ ಪದವಿಗೆ ಚುನಾಯಿತನಾದರೆ ಅಥವಾ ಯಾವುದೇ ರಾಜ್ಯದ ರಾಜ್ಯಪಾಲರ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರ ಹುದ್ದೆಗೆ ನೇಮಕಗೊಂಡರೆ; ಅಥವಾ

(ii) ಸಚಿವ, ರಾಜ್ಯ ಸಚಿವ, ಉಪಸಚಿವ, ಸಭಾಪತಿ, ಸಭಾಧ್ಯಕ್ಷ, ಉಪಸಭಾಪತಿ, ಉಪಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕ – ಈ ಹುದ್ದೆಗೆ ನೇಮಕಗೊಂಡರೆ ಅಥವಾ ಚುನಾಯಿತನಾದರೆ; ಅಥವಾ

(iii) ರಾಜ್ಯಸಭೆ ಅಥವಾ ಲೋಕಸಭೆ ಅಥವಾ ಒಂದು ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅಥವಾ ರಾಜ್ಯದ ಯಾವುದೇ ವಿಧಾನ ಪರಿಷತ್ತಿನ ಸದಸ್ಯನಾದರೆ; ಅಥವಾ

(iv) ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ನಿಗಮ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ ಸಂಬಳದ ಮೇಲೆ ನಿಯೋಜಿತನಾದರೆ ಅಥವಾ ಅನ್ಯಥಾ ಅಂಥ ಸರ್ಕಾರ, ನಿಗಮ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ಪರಿಶ್ರಮ ಧನಕ್ಕೆ ಯಾವುದೇ ಇತರ ರೀತಿಯಲ್ಲಿ ಹಕ್ಕುದಾರನಾದರೆ ಅಂಥ ವ್ಯಕ್ತಿಯು ಅಂಥ ಅಧಿಕಾರ ಹೊಂದಿರುವ ಅವಧಿಗಾಗಿ ಅಥವಾ ಅಂಥ ಸದಸ್ಯನಾಗಿರುವಾಗ ಅಥವಾ ಹಾಗೆ ನಿಯೋಜಿತನಾಗಿರುವಾಗ ಅಥವಾ ಅಂಥ ಪರಿಶ್ರಮಧನಕ್ಕೆ ಹಕ್ಕುದಾರನಾಗಿ ಮುಂದುವರೆಯುತ್ತಿರುವಾಗ, (1)ನೇ ಉಪಪ್ರಕರಣದ ಮೇರೆಗೆ ಯಾವುದೇ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಅಂಥ ವ್ಯಕ್ತಿಗೆ ಅಂಥ ಅಧಿಕಾರ ಹೊಂದಿರುವುದಾಗಿ ಅಥವಾ ಅಂಥ ಸದಸ್ಯನಾಗಿರುವುದಕ್ಕಾಗಿ ಅಥವಾ ಹಾಗೆ ನಿಯೋಜಿತನಾಗಿರುವುದಕ್ಕಾಗಿ ಸಂದಾಯ ಮಾಡಬಹುದಾದ ಸಂಬಳ ಅಥವಾ ಅಂಥ ವ್ಯಕ್ತಿಗೆ ಸಂದಾಯ ಮಾಡಬಹುದಾದ, (iv)ನೇ ಖಂಡದಲ್ಲಿ ಉಲ್ಲೇಖಿಸಿದ ಪರಿಶ್ರಮ ಧನವು ಎರಡೂ ಸಂದರ್ಭಗಳಲ್ಲಿ (1)ನೇ ಉಪಪ್ರಕರಣದ ಮೇರೆಗೆ ಅವನಿಗೆ ಸಂದಾಯವಾಗತಕ್ಕ ನಿವೃತ್ತಿ ವೇತನಕ್ಕಿಂತ ಕಡಿಮೆ ಇದ್ದರೆ ಅಂಥ ವ್ಯಕ್ತಿಯು ಆ ಉಪಪ್ರಕರಣದ ಮೇರೆಗೆ ಉಳಿದ ಭಾಗವನ್ನು ಮಾತ್ರ ನಿವೃತ್ತಿ ವೇತನವಾಗಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(4) (1)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ ವರ್ಷಗಳ ಸಂಖ್ಯೆಯನ್ನು ಲೆಕ್ಕ ಹಾಕುವಾಗ, ವ್ಯಕ್ತಿಯು ಈ ಮುಂದಿನ ಸ್ಥಾನಗಳಲ್ಲಿ, ಎಂದರೆ (1) ಸಚಿವ, ರಾಜ್ಯ ಸಚಿವ, ಉಪ ಸಚಿವ, ಸಂಸದೀಯ ಕಾರ್ಯದರ್ಶಿ, ಸಭಾಪತಿ, ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯತ್ವದ ಆಧಾರದ ಮೇಲೆ ಸರ್ಕಾರಿ ಮುಖ್ಯ ಸಚೇತಕ ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಸ್ಥಾನಗಳಲ್ಲಿ ಅವನು ಸಲ್ಲಿಸಿದ ಸೇವೆಯ ಅವಧಿಯನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(5) ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾದ ಪ್ರತಿಯೊಬ್ಬ ಸದಸ್ಯನಿಗೆ,–

(i) ಅವನಿಗೆ ಮತ್ತು ಅವನ ಜೊತೆಗಾರನಿಗೆ ವರ್ಗಾವಣೆ ಮಾಡಲಾಗದ ಒಂದು ಪಾಸನ್ನು ಒದಗಿಸತಕ್ಕದ್ದು ಮತ್ತು ಅದು, ಅವನು ಯಾವುದೇ ಸಮಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ರಸ್ತೆ ಸಾರಿಗೆ ಸೇವೆಗಳ ಮೂಲಕ, ಕರ್ನಾಟಕದಲ್ಲಿ ಅವನು ಸಾಮಾನ್ಯವಾಗಿ ವಾಸಿಸುವ ಸ್ಥಳದಿಂದ ಕರ್ನಾಟಕದ ಯಾವುದೇ ಸ್ಥಳಕ್ಕೆ ಅಥವಾ ರಾಜ್ಯದ ಹೊರಗೆ ಹೋಗಲು ಮತ್ತು ಹಿಂತಿರುವುದಕ್ಕೆ, ಅದರಲ್ಲಿ ನಿಯಮಿಸಬಹುದಾದಂಥ ದರ್ಜೆಯಲ್ಲಿ ಹೋಗಿಬರಲು, ಅರ್ಹನಾಗಿರತಕ್ಕದ್ದು.

(ii) ಆತನಿಗೆ ಆತನ ಒಬ್ಬನು ಜೊತೆಗಾರನಿಗೆ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಬಾರತದಲ್ಲಿ ರೈಲಿನ ಮೂಲಕ ಮೊದಲನೆ ದರ್ಜೆ/ಎರಡನೇ ದರ್ಜೆ ಏರ್ ಕಂಡಿಷನ್‌ನಲ್ಲಿ ಪ್ರಯಾಣಿಸಲು ವರ್ಷವೊಂದಕ್ಕೆ ಗರಿಷ್ಠ ಒಂದು ಲಕ್ಷ ರೂಪಾಯಿಗಳಾಗಿರತಕ್ಕದ್ದು.

**11ಬಿ. ಕುಟುಂಬ ನಿವೃತ್ತಿ ವೇತನ.**– (1) ಒಬ್ಬ ಸದಸ್ಯ ತನ್ನ ಅಧಿಕಾರದ ಅವಧಿ ಮುಗಿಯುವ ಮೊದಲೇ ಅಥವಾ 11–ಎ ಪ್ರಕರಣದ ಅಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹನಾದ ಒಬ್ಬ ವ್ಯಕ್ತಿಯು ಮರಣ ಹೊಂದಿದರೆ, ಅವನ ಕುಟುಂಬಕ್ಕೆ, ಪ್ರತಿ ತಿಂಗಳಿಗೆ 11ಎ ಪ್ರಕರಣದ ಅಡಿಯಲ್ಲಿ ಪಡೆಯುತ್ತಿದ್ದ ನಿವೃತ್ತಿ ವೇತನದ ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವು ಸಂದಾಯವಾಗತಕ್ಕದ್ದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, 1952ನೇ ಜನವರಿ 1ನೇ ದಿನದ ತರುವಾಯ ವಿಧಾನಪರಿಷತ್ತಿನ ಅಥವಾ ವಿಧಾನಸಭೆಯ ಸದಸ್ಯನಾಗಿದ್ದು, ಮೃತನಾದ ವ್ಯಕ್ತಿಯ ಕುಟುಂಬವು, ಆತನು ನಿವೃತ್ತಿ ವೇತನವನ್ನು ಪಡೆಯುತ್ತಿರಲಿ ಅಥವಾ ಇಲ್ಲದಿರಲಿ, ಮೃತ ವ್ಯಕ್ತಿಯು 26–12–1978ರ ನಂತರ ಸದಸ್ಯನಾಗಿದ್ದನೆಂಬಂತೆಯೇ (1)ನೇ ಉಪಪ್ರಕರಣದ ಅಡಿಯಲಲಿ ನಿರ್ದಿಷ್ಟಪಡಿಸಿದ ದರದಲ್ಲಿ ಕುಟುಂಬ ನಿವೃತ್ತಿ ವೇತನಕ್ಕೆ ಅರ್ಹವಾಗತಕ್ಕದ್ದು.

**ವಿವರಣೆ:**– (1) ಮತ್ತು (2)ನೇ ಉಪಪ್ರಕರಣಗಳ ಉದ್ದೇಶಕ್ಕಾಗಿ, 'ಕುಟುಂಬ' ಎಂದರೆ ಮೃತ ಸದಸ್ಯನ ಈ ಮುಂದಿನ ಸಂಬಂಧಿಗಳು, ಎಂದರೆ:–

(ಎ) ಹೆಂಡತಿ ಅಥವಾ ಗಂಡ;

(ಬಿ) ಅಪ್ರಾಪ್ತ ವಯಸ್ಕ ಗಂಡು ಮಕ್ಕಳು; ಮತ್ತು

(ಸಿ) ಅವಿವಾಹಿತ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳು.

(2) (1)ನೇ ಉಪಪ್ರಕರಣದ ಮೇರೆಗೆ ಅನ್ವಯಿಸುವ ಕುಟುಂಬ ನಿವೃತ್ತಿ ವೇತನವು ಈ ಮುಂದಿನ ಕ್ರಮದಲ್ಲಿ ಸಂದಾಯವಾಗತಕ್ಕದ್ದು:–

(ಎ) ಹೆಂಡತಿ ಅಥವಾ ಗಂಡ; ಮತ್ತು

(ಬಿ) ಸದಸ್ಯನ/ಳ ಗಂಡ: ಹೆಂಡತಿ ಬದುಕಿರದಿದ್ದಾಗ ವಯಸ್ಕ ಗಂಡು ಮಕ್ಕಳಲ್ಲಿ ಅಥವಾ

ಅವಿವಾಹಿತ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳಲ್ಲಿ ಹಿರಿಯ ವ್ಯಕ್ತಿಗೆ:

ಪರಂತು, ಕುಟುಂಬ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ ಮೃತನಾದರೆ ಅಥವಾ ವಿವಾಹವಾದರೆ ಅಥವಾ ಪ್ರಾಪ್ತ ವಯಸ್ಕನಾದರೆ ಸಂದಾಯ ಮಾಡಬೇಕಾದ ನಿವೃತ್ತಿ ವೇತನವನ್ನು ಆದ್ಯತೆಯ ಕ್ರಮಾಂಕದಲ್ಲಿ ಅವನ ನಂತರ ಕಿರಿಯನಾದ ವ್ಯಕ್ತಿಗೆ ವೇತನವು ಸಂದಾಯವಾಗತಕ್ಕದ್ದು.

xx xx xx

